# ಕರ್ನಾಟಕ ಜೀವ

ಸಂಪಾದಕರು: ಪರ್ವೀಜ್ ಪಾಷಾ
Editor : PARVEEZ PASHA

KARNATAKA JEEVA

Kannada Fortnightly ಕನ್ನಡ ಪಾಕ್ಷಿಕ ಪತ್ರಿಕೆ

Volume : 4 | Issue : 4 | Reg No. KARKAN28061 | Bengaluru | January 15–31, 2026 | Pages: 8 | Price : Rs. 10/-

ಸಂಪುಟ : 4 | ಸಂಚಿಕೆ: 4 | Reg No. KARKAN28061 | ಬೆಂಗಳೂರು | ಜನವರಿ 15–31, 2026 | ಪುಟ: 8 | ಬೆಲೆ: 10 ರೂ/–







## ಸಂವಿಧಾನವನ್ನು ರಕ್ಷಿಸಿದರೆ ಸಂವಿಧಾನವು ನಮ್ಮನ್ನು ರಕ್ಷಿಸುತ್ತದೆ ಎಂಬ ಅರಿವು ಮೂಡಿಸಬೇಕಾಗಿದೆ: ಶಾಸಕ ಎಸ್.ಟಿ.ಸೋಮಶೇಖರ್

## ಕೇಂದ್ರ ಮುಂಗಡ ಪತ್ರ 2026-27 ಮಕ್ಕಳ ಪಾಲಿಗೆ ಅಲ್ಪ ಲಾಭ, ಆದರೆ ಆದ್ಯತೆಗಳು ಇನ್ನಷ್ಟು ಸ್ಪಷ್ಟವಾಗುವ ಅಗತ್ಯ

ಕರ್ನಾಟಕ ಜೀವ
KARNATAKA JEEVA
Editor
ಪರ್ವೀಜ್ ಪಾಷಾ

# ಕೆಂಗೇರಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಮಾನವ ಹಕ್ಕುಗಳ ಆಯೋಗದ ಡಿವೈಎಸ್ಪಿ ಸುಧೀರ್.ಎಂ.ಹೆಗ್ಡೆ ದಿಢೀರ್ ಭೇಟಿ




ಯಶವಂತಪುರ: ಕೆಂಗೇರಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಮಾನವ ಹಕ್ಕುಗಳ ಆಯೋಗದ ಡಿವೈಎಸ್ಪಿ ಸುಧೀರ್.ಎಂ.ಹೆಗ್ಡೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜಯಪ್ರಕಾಶ್ ನಾರಾಯಣ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಂ.ಶಿವಕುಮಾರ್ ಕೆಂಗೇರಿ ಕೋಟೆಯ ಸಮುದಾಯ ಆರೋಗ್ಯ ಕೇಂದ್ರದ ಶಿಶು ತಜ್ಞರನ್ನು ಸರ್ಕಾರಿ ಏಕಾಏಕಿ ವರ್ಗಾವಣೆ ಮಾಡಿದ್ದು, ಕೆಂಗೇರಿ ಸುತ್ತಮುತ್ತಲಿನ ಗ್ರಾಮಗಳ ಗರ್ಭಿಣಿ ಸ್ತ್ರೀಯರಿಗೆ ತುರ್ತು ಪರಿಸ್ಥಿತಿಯಲ್ಲಿ ತೊಂದರೆಯಾಗುತ್ತಿದೆ ಎಂದು ನೀಡಿದ ದೂರಿನನ್ವಯ ಸ್ಥಳಕ್ಕಾಗಮಿಸಿದ ಅವರು ವೈದ್ಯಾಧಿಕಾರಿ, ರೋಗಿಗಳು ಹಾಗೂ ಸ್ಥಳೀಯರಿಂದ ಮಾಹಿತಿ ಪಡೆದುಕೊಂಡರು.

ಆಡಳಿತ ವೈದ್ಯಾಧಿಕಾರಿ ಡಾ.ಕೆ.ಟಿ.ವೆಂಕಟೇಶ್ ಅವರು ಬಳಿ ಮಾಹಿತಿ ಕೇಳಿದ ಸಂದರ್ಭದಲ್ಲಿ ಕೊಡಲು ನಿರಾಕರಣೆ ಹಾಗೂ ಮಾಹಿತಿ ಹಕ್ಕು ಮೂಲಕ ಅರ್ಜಿ ಸಲ್ಲಿಸಿ ಪಡೆಯಬೇಕೆಂಬ ಮಾತಿಗೆ ಕೆಂಡಾಮಂಡಲರಾದ ಡಿವೈಎಸ್ಪಿ ಸುಧೀಂದ್ರ.ಎಂ.ಹೆಗ್ಡೆ ನಿಮ್ಮ ಮೇಲೆ ಸೆಕ್ಷನ್ 44ರ ಅಡಿಯಲ್ಲಿ ಕೇಸು ದಾಖಲು ಮಾಡಲಾಗುವುದು ಎಂದು ತರಾಟೆಗೆ ತೆಗೆದುಕೊಂಡರು.

ಸಮುದಾಯ ಆಸ್ಪತ್ರೆಯಲ್ಲಿ ಬಾಣಂತಿಯರಿಗೆ ಪೌಷ್ಟಿಕ ಆಹಾರ ಊಟ ನೀಡುತ್ತಿಲ್ಲ ಎಂಬ ದೂರಿಗೆ ಈ ಹಿಂದೆ ಎನ್.ಜಿ.ಓ ಸಂಸ್ಥೆಯ ಮೂಲಕ ಊಟದ ವ್ಯವಸ್ಥೆ ಮಾಡಲಾಗುತ್ತಿದ್ದು, ಬಿಲ್ ಪಾವತಿಯಾಗದ ಕಾರಣ ಊಟದ ವ್ಯವಸ್ಥೆ ಸ್ಥಗಿತಗೊಂಡಿದೆ ಎಂದ ಆಡಳಿತ ವೈದ್ಯಾಧಿಕಾರಿ ವಿರುದ್ಧ ಮಾನವ ಹಕ್ಕುಗಳ ಡಿವೈಎಸ್ಪಿ ತ್ರಿಸದಸ್ಯ ಪೀಠ ನ್ಯಾಯಾಲಯದ ಮೂಲಕ ನೋಟಿಸ್ ನೀಡಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸುತ್ತಮುತ್ತಲಿನ ನಗರ ಪ್ರದೇಶ ಸೇರಿದಂತೆ ಹತ್ತಾರು ಹಳ್ಳಿಗಳ ಲಕ್ಷಾಂತರ ಜನರಿಗೆ ಕೆಂಗೇರಿ ಸಮುದಾಯ ಆರೋಗ್ಯ ಕೇಂದ್ರವೂ ಕೇಂದ್ರ ಸ್ಥಾನವಾಗಿದ್ದು, ಪ್ರಮುಖ ಶಸ್ತ್ರಚಿಕಿತ್ಸೆ ಕೊಠಡಿ ದುರಸ್ತಿಯಲ್ಲಿದೆ.ಚಿಕಿತ್ಸೆಗಾಗಿ ಅರಸಿ ಬರುವ ರೋಗಿಗಳಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸುವ ಕೆಲಸ ಮಾಡಬೇಕಾದ ರಾಜ್ಯ ಸರ್ಕಾರ ಮೇಲ್ದರ್ಜೆಯ ಸಮುದಾಯ ಆಸ್ಪತ್ರೆಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಕೆಳದರ್ಜೆಗೆ ಇಳಿಸುವ ಹುನ್ನಾರ ನಡೆಸುತ್ತಿದೆ ಎಂದು ರೋಗಿಗಳು ಅಲವತ್ತುಕೊಂಡರು.

ಸಮುದಾಯ ಆರೋಗ್ಯ ಕೇಂದ್ರಗಳ ವೈದ್ಯರನ್ನು ಬೇರೆಡೆ ಸ್ಥಳಾಂತರಿಸಿ ಸಾಮಾನ್ಯ ಖಾಯಿಲೆಗಳಿಗೆ ಚಿಕಿತ್ಸೆ ನೀಡಲು ಮುಂದಾಗಿದ್ದಾರೆ.ಅಗತ್ಯ ಸಂಖ್ಯೆಯ ವೈದ್ಯರು, ತಜ್ಞರು ಮತ್ತು ವೈದ್ಯಕೀಯ ಸಿಬ್ಬಂದಿಗಳನ್ನು ಕೂಡಲೇ ನೇಮಕಾತಿ ಮಾಡಬೇಕು.ಆರೋಗ್ಯ ಕೇಂದ್ರದಲ್ಲಿ ಸ್ವಚ್ಛತೆಯ ಬಗ್ಗೆ ನಿಗಾ ವಹಿಸಬೇಕು.ಸಮುದಾಯ ಆಸ್ಪತ್ರೆಯನ್ನು ಯಾವುದೇ ಕಾರಣಕ್ಕೂ ಪ್ರಾಥಮಿಕ ಆರೋಗ್ಯ ಕೇಂದ್ರವಾಗಲು ಬಿಡುವುದಿಲ್ಲ ಎಂದು ಸ್ಥಳೀಯರು ಆಗ್ರಹಿಸಿದರು.

ಮಾನವ ಹಕ್ಕುಗಳ ಆಯೋಗದ ಡಿವೈಎಸ್ಪಿ ಸುಧೀರ್.ಎಂ.ಹೆಗ್ಡೆ ಮಾತನಾಡಿ

ದೂರಿಗೆ ಸಂಬಂಧಿಸಿದಂತೆ ವೈದ್ಯಾಧಿಕಾರಿ, ರೋಗಿಗಳು ಹಾಗೂ ಸ್ಥಳೀಯರಿಂದ ಆಡಿಯೋ/ವೀಡಿಯೋ ಸಾಕ್ಷ್ಯಾಧಾರಗಳನ್ನು ಸಂಗ್ರಹಣೆ ಮಾಡಲಾಗಿದೆ.ತ್ರಿಸದಸ್ಯ ಪೀಠ ನ್ಯಾಯಾಲಯದ ಮೂಲಕ ನೋಟಿಸ್ ಜಾರಿ ಮಾಡಿ ನಾಲ್ಕೈದು ದಿನಗಳಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು.

# ರಾಜ್ಯ ಸರಕಾರ 'ವಿಬಿ–ಗ್ರಾಮ್ ಜಿ ಕಾಯ್ದೆ' ತಿರಸ್ಕರಿಸಲು ಆಗ್ರಹ

ಬೆಂಗಳೂರು : ನರೇಗಾ ಯೋಜನೆಯನ್ನು ಮುಂದುವರಿಸಲು ರಾಷ್ಟ್ರಪತಿಯವರು ಆದೇಶ ಹೊರಡಿಸಬೇಕು. ವಿಬಿ□ಗ್ರಾಮ್ ಜಿ ಕಾಯ್ದೆಯನ್ನು ರಾಜ್ಯ ಸರ್ಕಾರ ತಿರಸ್ಕರಿಸಬೇಕು ಎಂದು ಆಗ್ರಹಿಸಿ 'ಮನರೇಗಾ ರಕ್ಷಣಾ ಒಕ್ಕೂಟ'ದ ಮಹಾ ಪಂಚಾಯಿತಿಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ಫ್ರೀಡಂಪಾರ್ಕ್‌ನಲ್ಲಿ ಮನರೇಗಾ ರಕ್ಷಣಾ ಒಕ್ಕೂಟ ವತಿಯಿಂದ ಮನರೇಗಾ ಯೋಜನೆ ಉಳಿಸಿ ಆಂದೋಲನದ ಭಾಗವಾಗಿ ನಡೆದ 'ಮಹಾ ಪಂಚಾಯತ್'ನಲ್ಲಿ, ಮಹಾಪಂಚಾಯಿತಿ ತೆಗೆದುಕೊಂಡಿರುವ ನಿರ್ಣಯಗಳನ್ನು ರಾಜ್ಯ ಸರ್ಕಾರವು ರಾಜ್ಯಪಾಲರ ಮೂಲಕ ರಾಷ್ಟ್ರಪತಿಯವರಿಗೆ ಕಳುಹಿಸಿಕೊಡಬೇಕು. ನರೇಗಾವನ್ನು ಬಲಗೊಳಿಸುವ ಕ್ರಮಗಳನ್ನು ರಾಜ್ಯ ಸರ್ಕಾರ ಕೈಗೊಳ್ಳಬೇಕು ಎಂದು ಆಗ್ರಹಿಸಲಾಯಿತು.

ಹೋರಾಟಗಾರ ನೂರ್ ಶ್ರೀಧರ್ ಮಾತನಾಡಿ, ಗ್ರಾಮೀಣ ಭಾಗದ ಬಡವರ ಬೆನ್ನೆಲುಬು ಆಗಿದ್ದ, ಸಂವಿಧಾನದಬದ್ಧ ಹಕ್ಕು ಆಗಿದ್ದ ನರೇಗಾ ಯೋಜನೆಯನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿದೆ. ಜನರನ್ನು ಅತಂತ್ರಗೊಳಿಸುವ, ಎಲ್ಲ ತೀರ್ಮಾನವನ್ನು ಕೈಗೊಳ್ಳುವ ಹಕ್ಕನ್ನು ಕೇಂದ್ರ ಸರ್ಕಾರವೇ ವಶಪಡಿಸಿಕೊಳ್ಳುವ ಮತ್ತು ಜವಾಬ್ದಾರಿಯನ್ನು ರಾಜ್ಯ ಸರ್ಕಾರದ ಮೇಲೆ ಹೊತ್ತು ಹಾಕುವ ವಿಬಿ ಗ್ರಾಮ್ ಜಿ ಕಾಯ್ದೆಯನ್ನು ಜಾರಿಗೆ ತಂದಿದೆ ಎಂದರು.

ವಿಕೇಂದ್ರೀಕರಣದ ಸಂಕೇತವಾಗಿ ಇದ್ದ ನರೇಗಾವನ್ನು ರದ್ದು ಮಾಡಿ ಈಗ ಕೇಂದ್ರೀಕರಣದ ಯೋಜನೆಯನ್ನು ಜಾರಿಗೆ ತರಲಾಗಿದೆ. ನರೇಗಾವನ್ನು ಮುಂದುವರಿಸಬೇಕು. ಅಲ್ಲದೇ ಕುಟುಂಬಕ್ಕೆ ನೂರು ದಿನ ಕೆಲಸ ಎಂಬುದನ್ನು ಪ್ರತಿ ವ್ಯಕ್ತಿಗೆ ನೂರು ದಿನ ಎಂದು ಪರಿವರ್ತಿಸಬೇಕು. ಪ್ರತಿ ಕುಟುಂಬಕ್ಕೆ ಸರಾಸರಿ 300 ದಿನ ಕೆಲಸ ಸಿಗುವಂತೆ ಮಾಡಬೇಕು. ಕನಿಷ್ಠ ಕೂಲಿಯನ್ನು 600 ರೂ.ಕ್ಕೆ ಏರಿಸಬೇಕು ಎಂದು ಅವರು ಒತ್ತಾಯಿಸಿದರು.

ನರೇಗಾ ಯೋಜನೆ ಇರುವಾಗ ಬೇಡಿಕೆ ಇದ್ದಷ್ಟು ದಿನ ಕೆಲಸ ಎಂದಿದ್ದನ್ನು 'ವಿಬಿ ಗ್ರಾಮ್ ಜಿ'ಯಲ್ಲಿ ಅಗತ್ಯ ಇರುವಷ್ಟು ಕೆಲಸ ಎಂದು ಪರಿವರ್ತನೆ ಮಾಡಲಾಗಿದೆ. ಕೆಲಸ ಮಾಡುವ ಹಕ್ಕು ಕಿತ್ತುಕೊಂಡಿದೆ. ಉದ್ಯೋಗ ಖಾತ್ರಿ



ಇಲ್ಲದಾಗಿದೆ. ಯಾವ ಕೆಲಸ ಎಂಬುದನ್ನು ಗ್ರಾಮ ಪಂಚಾಯಿತಿ ತೀರ್ಮಾನ ಮಾಡುತ್ತಿತ್ತು. ಇನ್ನು ಮುಂದೆ ಕೇಂದ್ರ ಸರ್ಕಾರ ನಿರ್ಧಾರ ಮಾಡುತ್ತದೆ. ಕೃಷಿ ಕೂಲಿಯನ್ನು ಹೊರಗಿಡಲಾಗಿದೆ. ಕೇಂದ್ರ ಸರ್ಕಾರವು ರಾಜ್ಯ ಪಾಲನ್ನು ಬಿಟ್ಟು 2.3 ಲಕ್ಷ ಕೋಟಿ ರೂ.ಅನ್ನು ಈ ಯೋಜನೆಗೆ ಮೀಸಲಿಡಬೇಕಿತ್ತು. ಆದರೆ, ಬಜೆಟ್‌ನಲ್ಲಿ 95 ಸಾವಿರ ಕೋಟಿ ರೂ. ಅನ್ನು ಮೀಸಲಿಟ್ಟಿದೆ. ಇದು ಕೆಲಸ ಕಡಿಮೆ ಮಾಡುವ ಹುನ್ನಾರ ಎಂದು ದೂರಿದರು.

ಶೇ.40 ಅನ್ನು ರಾಜ್ಯ ಸರ್ಕಾರ ನೀಡಬೇಕು ಎಂದು ಹೊರೆ ಹೊರಿಸಲಾಗಿದೆ. ಇದನ್ನು ತೆಗೆದು ಹಾಕಬೇಕು. ನರೇಗಾದಲ್ಲಿ ಮಧ್ಯವರ್ತಿಗಳಿಗೆ ಅವಕಾಶ ಇರಲಿಲ್ಲ. 'ವಿಬಿ ಗ್ರಾಮ್ ಜಿ'ಯಲ್ಲಿ ಮಧ್ಯವರ್ತಿಗಲಿಗೆ ಅವಕಾಶವಾಗಿದೆ. ಹಾಗಾಗಿ ನರೇಗಾವನ್ನು ಮತ್ತೆ ಸ್ಥಾಪಿಸಬೇಕು ಎಂದು ನೂರ್ ಶ್ರೀಧರ್ ಒತ್ತಾಯಿಸಿದರು.

ಮಹಾಪಂಚಾಯತ್‌ನಲ್ಲಿ ಮನರೇಗಾ ರಕ್ಷಣಾ ಒಕ್ಕೂಟ, ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ, ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ, ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ, ಕರ್ನಾಟಕ ಜನಶಕ್ತಿ, ಸಿಪಿಐಎಂಎಲ್, ನಮ್ಮೂರ ಭೂಮಿ ನಮಗಿರಲಿ, ಅನ್ಯರಿಗಲ್ಲ ಸಂಘಟನೆ, ಜಾಗೃತ ಮಹಿಳಾ ಒಕ್ಕೂಟ, ಬಳ್ಳಿ ಬಳಗ□ಸುಸ್ಥಿರ ಕೃಷಿಕರ ವೇದಿಕೆ, ಎಫ್‌ಇಎಸ್, ಭೂಶಕ್ತಿ ಕೇಂದ್ರ, ಎಐಎಆರ್‌ಎಲ್‌ಐ, ಆರ್‌ಐಎಆರ್‌ಡಬ್ಲ್ಯೂ, ರೈತ ಸಂಘಟನೆಗಳು, ದಲಿತ ಸಂಘರ್ಷ ಸಮಿತಿಗಳು, ಎಪಿಯು, ಕಾರ್ಮಿಕ ಸಂಘಟನೆಗಳ ಮುಖಂಡರು, ಸಾಹಿತಿಗಳು, ಚಿಂತಕರು ಭಾಗವಹಿಸಿದ್ದರು.

# ಸಿಗರೇಟ್ ಬೆಲೆ ಬಲು ದುಬಾರಿ: ವ್ಯಸನಿಗಳಿಗೆ ಬಿಗ್‌ಶಾಕ್

ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರವರಿ 1ರ ಭಾನುವಾರದಂದು ಕೇಂದ್ರ ಬಜೆಟ್ ಮಂಡನೆ ಮಾಡಿದರು. ಈ ವೇಳೆ ಕೆಲವು ವಸ್ತುಗಳ ಬೆಲೆ ಏರಿಕೆ ಮಾಡುವುದಾಗಿ ಘೋಷಣೆ ಮಾಡಿದ್ದಾರೆ. ಹಾಗೆಯೇ ಕೇಂದ್ರ ಬಜೆಟ್ 2026ರ ಬಳಿಕ ದೇಶದಲ್ಲಿ ಹೊಗೆ ಬಿಡುವ ಸಿಗರೇಟ್ ಹಾಗೂ ತಂಬಾಕು ಉತ್ಪನ್ನಗಳ ಮೇಲೆ ವಿಧಿಸಲಾದ ಹೆಚ್ಚುವರಿ ಅಬಕಾರಿ ಸುಂಕ ಜಾರಿಗೆ ಬಂದಿದ್ದು, ಇದರ ಪರಿಣಾಮ ವಾಗಿ ಇವುಗಳ ಬೆಲೆಯಲ್ಲಿ ಗಮನಾರ್ಹ ಏರಿಕೆ ಕಂಡು ಬಂದಿದೆ. ಹಾಗಾದ್ರೆ ಯಾವುದಕ್ಕೆ ಎಷ್ಟು ಎನ್ನುವ ಸಂಪೂರ್ಣ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ ತಿಳಿಯಿರಿ.

**ಸಿಗರೇಟ್, ತಂಬಾಕು ಉತ್ಪನ್ನಗಳ ದರ ಏರಿಕೆ:** ಫೆಬ್ರವರಿ 1ರಿಂದ ಜಾರಿಗೆ ಬಂದಿರುವ ಹೊಸ ತೆರಿಗೆ ವ್ಯವಸ್ಥೆಯಿಂದಾಗಿ 10 ಸ್ಟಿಕ್‌ಗಳ ಸಿಗರೇಟ್ ಪ್ಯಾಕ್‌ಗೆ ಕನಿಷ್ಠ 22ರಿಂದ 25 ರೂಪಾಯಿ ವರೆಗೆ ಬೆಲೆ ಹೆಚ್ಚಳವಾಗಿದೆ. ಸಿಗರೇಟ್ ಮತ್ತು ತಂಬಾಕು ಉತ್ಪನ್ನಗಳ ಮೇಲೆ ಹೆಚ್ಚುವರಿ ಎಕ್ಸೈಸ್ ಸುಂಕ ವಿಧಿಸಿರುವುದರ ಜೊತೆಗೆ, ಪಾನ್ ಮಸಾಲಾ ಮೇಲೂ ಆರೋಗ್ಯ ಸೆಸ್ ಜಾರಿಯಾಗಿದೆ. ಇದುವರೆಗೆ ಜಾರಿಯಲ್ಲಿದ್ದ ಗರಿಷ್ಠ 40 ಶೇಕಡಾ



ಜಿಎಸ್‌ಟಿಗೆ ಹೆಚ್ಚುವರಿಯಾಗಿ ಈ ತೆರಿಗೆ ವಿಧಿಸಲಾಗಿದೆ.

**ಯಾವ ಸಿಗರೇಟ್‌ಗೆ ಎಷ್ಟು ದರ ಏರಿಕೆ?:** ವಿತರಕರ ಮಾಹಿತಿಯಂತೆ, 76 ಎಂ.ಎಂ. ಉದ್ದದ ಪ್ರೀಮಿಯಂ ಸಿಗರೇಟ್ ಪ್ಯಾಕ್‌ಗಳ ಬೆಲೆ ಬ್ರ್ಯಾಂಡ್ ಅವಲಂಬಿಸಿ 50 ರಿಂದ 55 ರೂವರೆಗೆ ಹೆಚ್ಚಾಗುವ ಸಾಧ್ಯತೆಯಿದೆ.

ಆದರೆ, ತಯಾರಕರು ಇನ್ನೂ ಹೊಸ ಎಂಆರ್‌ಪಿ ಪ್ರಕಟಿಸಿಲ್ಲ. ಈ ನಡುವೆ ಹಳೆಯ ಸ್ಟಾಕ್‌ಗಳನ್ನು ವಿತರಕರು ಚಿಲ್ಲರೆ ವ್ಯಾಪಾರಿಗಳಿಗೆ 40 ಶೇಕಡಾ ಜಿಎಸ್‌ಟಿ ಅನ್ವಯ ಬಿಲ್ ಮಾಡುತ್ತಿದ್ದಾರೆ.

ಭಾನುವಾರ ಹೋಲ್‌ಸೇಲ್ ಮಾರು ಕಟ್ಟೆಗಳು ಬಂದ್ ಆಗಿದ್ದರಿಂದ, ಸೋಮ ವಾರದಿಂದ ಹೊಸ ಎಂಆರ್‌ಪಿ ಹೊಂದಿರುವ ಸ್ಟಾಕ್ ಮಾರುಕಟ್ಟೆಗೆ ಲಭ್ಯವಾಗಲಿದೆ ಎಂದು ವಿತರಕರು ತಿಳಿಸಿದ್ದಾರೆ.




**ಪರ್ವೀಜ್ ಪಾಷಾ**
**ಸಂಪಾದಕರು**
**Editor**

**ಸಂಪಾದಕೀಯ Editorial**

# ಕೇಂದ್ರ ಮುಂಗಡ ಪತ್ರ 2026–27 ಮಕ್ಕಳ ಪಾಲಿಗೆ ಅಲ್ಪ ಲಾಭ, ಆದರೆ ಆದ್ಯತೆಗಳು ಇನ್ನಷ್ಟು ಸ್ಪಷ್ಟವಾಗುವ ಅಗತ್ಯ

ಬೆಂಗಳೂರು : ಸಿಆರ್‌ವೈ – ಚೈಲ್ಡ್ ರೈಟ್ಸ್ ಆಂಡ್ ಯೂ ಸಂಸ್ಥೆಯು ಆಯವ್ಯಯ ಮುಂಗಡ ಪತ್ರದ ವಿಶ್ಲೇಷಣೆಯ ಪ್ರಕಾರ, ಕೇಂದ್ರ ಮುಂಗಡ ಪತ್ರ 2026–27 ಮಕ್ಕಳಿಗಾಗಿನ ಹಣ ಹಂಚಿಕೆಯಲ್ಲಿ ಸಣ್ಣ ಮಟ್ಟದ ಆದರೆ ಗಮನಾರ್ಹ ಏರಿಕೆ ಮಾಡಿದೆ. ಇದು ಆರ್ಥಿಕ ಆದ್ಯತೆಗಳಲ್ಲಿನ ಆಮೂಲಾಗ್ರ ಬದಲಾವಣೆಗಿಂತ ಹೆಚ್ಚಾಗಿ, ಪ್ರತಿ ಹಂತದಲ್ಲೂ ಪ್ರಗತಿಯನ್ನು ಸೂಚಿಸುತ್ತದೆ. ಮಕ್ಕಳಿಗೆ ಸಂಬಂಧಿಸಿದ ಒಟ್ಟು ಹಂಚಿಕೆಯು 2025–26ರ (BE) ?1,16,132.5 ಕೋಟಿಯಿಂದ 2026–27ರಲ್ಲಿ (BE) ?1,32,296.85 ಕೋಟಿಗೆ ಏರಿದೆ. ಇದು 16,164.35 ಕೋಟಿಯಷ್ಟು ನಿವ್ವಳ ಹೆಚ್ಚಳವನ್ನು ದಾಖಲಿಸಿದೆ.

ಹಿಂದಿನ ಮುಂಗಡ ಪತ್ರಕ್ಕೆ (25–26) ಹೋಲಿಸಿದರೆ, ಕೇಂದ್ರ ಮುಂಗಡ ಪತ್ರದಲ್ಲಿ 'ಮಕ್ಕಳ ಮುಂಗಡ ಪತ್ರ'ದ ಪಾಲು ಒಟ್ಟು ಶೇ. 2.29 ರಿಂದ ಶೇ. 2.47 ಕ್ಕೆ ಏರಿದೆ. ಹಾಗೆಯೇ ಜಿಡಿಪಿ ಅನುಪಾತದಲ್ಲಿನ ಹಂಚಿಕೆಯು ಶೇ. 0.33 ರಿಂದ ಶೇ. 0.34 ಕ್ಕೆ ಅಲ್ಪ ಪ್ರಮಾಣದಲ್ಲಿ ಏರಿಕೆಯಾಗಿದೆ.

ಕೇಂದ್ರ ಮುಂಗಡ ಪತ್ರ 2026–27ರಲ್ಲಿ ಮಕ್ಕಳಿಗಾಗಿನ ಹಂಚಿಕೆಯು 1.32 ಲಕ್ಷ ಕೋಟಿಗಿಂತ ಸ್ವಲ್ಪ ಹೆಚ್ಚಿಗೆ ಇರುವ ಬಗ್ಗೆ ಮತ್ತು ಒಟ್ಟು ಮುಂಗಡ ಪತ್ರದಲ್ಲಿ ಇದರ ಪಾಲು ಶೇ. 2.47 ಕ್ಕೆ ಏರಿರುವ ಬಗ್ಗೆ ಮಾತನಾಡಿದ ಸಿಆರ್‌ವೈ ಸಂಸ್ಥೆಯ ಸಿಇಒ ಪೂಜಾ ಮಾರ್ವಾಹ ಅವರು, "ಇದು ಸಕಾರಾತ್ಮಕ ಉದ್ದೇಶವನ್ನು ಸೂಚಿಸುತ್ತದೆಯಾದರೂ, ಭಾರತದ ಜನಸಂಖ್ಯಾ ವಾಸ್ತವತೆ ಮತ್ತು ಮಕ್ಕಳ ಬೆಳೆಯುತ್ತಿರುವ ಅಭಿವೃದ್ಧಿಯ ಅಗತ್ಯತೆಗಳಿಗೆ ಹೋಲಿಸಿದರೆ ಹೂಡಿಕೆಯ ಒಟ್ಟಾರೆ ಪ್ರಮಾಣವು ಸೀಮಿತವಾಗಿದೆ. ಆರೋಗ್ಯ, ಪೋಷಣೆ ಮತ್ತು ಶಿಕ್ಷಣಕ್ಕೆ ಅನುಆದನ ಹೆಚ್ಚಳವು ಸ್ವಾಗತಾರ್ಹ. ಆದರೆ ಒಳಗೊಳ್ಳುವಿಕೆ ಮತ್ತು ಸುಸ್ಥಿರ ಬೆಳವಣಿಗೆಯನ್ನು ಸಾಧಿಸಲು ಮಕ್ಕಳಿಗೆ ಸಂಬಂಧಿತ ಆದ್ಯತೆಗಳು ಇನ್ನಷ್ಟು ಚುರುಕಾಗಬೇಕಿದೆ. ಕೇವಲ ವರ್ಷದಿಂದ ವರ್ಷಕ್ಕೆ ಮಾಡುವ ಅಲ್ಪ ಲಾಭಗಳಿಗಿಂತ ಹೆಚ್ಚಿನ ಮಟ್ಟದ ಬಲವಾದ ಮತ್ತು ಸಮಾನವಾದ ಹೂಡಿಕೆಗಳ ಅಗತ್ಯವಿದೆ," ಎಂದು ಹೇಳಿದರು.

**ಮಕ್ಕಳ ಆರೋಗ್ಯ ಮತ್ತು ಪೋಷಣೆ**

ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕುರಿತಾದ ಫ್ಲೆಕ್ಸಿಬಲ್ ಪೂಲ್, ಆರೋಗ್ಯ ವ್ಯವಸ್ಥೆ ಬಲಪಡಿಸುವಿಕೆ, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಮತ್ತು ರಾಷ್ಟ್ರೀಯ ನಗರ ಆರೋಗ್ಯ ಮಿಷನ್‌ಗೆ ಹಂಚಿಕೆಯು 261.15 ಕೋಟಿಗಳಷ್ಟು ಏರಿಕೆಯಾಗಿದ್ದು, ಒಟ್ಟು 4,591.58 ಕೋಟಿಗಳಿಗೆ ತಲುಪಿದೆ. ಸಕ್ಷಮ್ ಅಂಗನವಾಡಿ ಮತ್ತು ಪೋಷಣ್ 2.0 ಯೋಜನೆಯಲ್ಲಿ ಶೇ. 5.19 ರಷ್ಟು ಗಮನಾರ್ಹ ಏರಿಕೆ ಕಂಡುಬಂದಿದ್ದು, ಹಂಚಿಕೆಯು 969 ಕೋಟಿಗಳಿಂದ 19,635 ಕೋಟಿಗಳಿಗೆ ಹೆಚ್ಚಳವಾಗಿದೆ.

ಪಿಎಂ ಪೋಷಣ್ ಶಕ್ತಿ ನಿರ್ಮಾಣ್ ಯೋಜನೆಯು ಶೇ. 2 ರಷ್ಟು ಹೆಚ್ಚಳವನ್ನು ಸಾಧಿಸಿದ್ದು, 12,749.99 ಕೋಟಿಗಳಿಗೆ ಏರಿದೆ. ಪ್ರಮುಖವಾಗಿ, ಮಕ್ಕಳ ಆರೋಗ್ಯದ ಫಲಿತಾಂಶಗಳಲ್ಲಿ ಸುರಕ್ಷಿತ ಕುಡಿಯುವ ನೀರಿನ ಪ್ರಾಮುಖ್ಯತೆಯನ್ನು ಒತ್ತಿಹೇಳಲು, 2024–25ರ ಹಣಕಾಸು ವರ್ಷದ ನಂತರ ಜಲ ಜೀವನ್ ಮಿಷನ್ ಅನ್ನು ಮತ್ತೆ ಮಕ್ಕಳ ಬಜೆಟ್‌ಗೆ ಸೇರಿಸಲಾಗಿದೆ ಮತ್ತು ಇದಕ್ಕೆ 6,736.36 ಕೋಟಿಗಳನ್ನು ಹಂಚಿಕೆ ಮಾಡಲಾಗಿದೆ.

ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ, ಆರೋಗ್ಯ ವ್ಯವಸ್ಥೆ ಬಲಪಡಿಸುವಿಕೆ, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಮತ್ತು ರಾಷ್ಟ್ರೀಯ ನಗರ ಆರೋಗ್ಯ ಮಿಷನ್‌ಗಳ ಫ್ಲೆಕ್ಸಿಬಲ್ ಪೂಲ್‌ಗಾಗಿನ ಮೊತ್ತವು 261.15 ಕೋಟಿಗಳಷ್ಟು ಏರಿಕೆಯಾಗಿ 4,591.58 ಕೋಟಿಗಳಿಗೆ ತಲುಪಿದೆ. ಸಕ್ಷಮ್ ಅಂಗನವಾಡಿ ಮತ್ತು ಪೋಷಣ್ 2.0 ಯೋಜನೆಯಲ್ಲಿ ಶೇ. 5.19 ರಷ್ಟು ಏರಿಕೆ ಕಂಡುಬಂದಿದ್ದು, ಹಂಚಿಕೆಯು 969 ಕೋಟಿ ಹೆಚ್ಚಳದೊಂದಿಗೆ 19,635 ಕೋಟಿಗಳಾಗಿದೆ.

ಪೋಷಣ್ 2.0 ಕಾರ್ಯಕ್ರಮವು ಸರ್ಕಾರದ ಪ್ರಮುಖ ಪೌಷ್ಟಿಕಾಂಶ ಯೋಜನೆಯಾಗಿದ್ದು, ಪೂರಕ ಪೌಷ್ಟಿಕಾಂಶದ ಮಧ್ಯಸ್ಥಿಕೆಗಳ ಮೂಲಕ ಮಕ್ಕಳು, ಹದಿಹರೆಯದ ಹುಡುಗಿಯರು, ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರಲ್ಲಿನ ಅಪೌಷ್ಟಿಕತೆಯನ್ನು ಹೋಗಲಾಡಿಸುವ ಗುರಿಯನ್ನು ಹೊಂದಿದೆ. ಈ ಅನುದಾನದ ಹೆಚ್ಚಳವು ಅಂಗನವಾಡಿ ಮಟ್ಟದಲ್ಲಿ ಪೌಷ್ಟಿಕಾಂಶ ಸೇವೆಗಳ ವ್ಯಾಪಕ ವ್ಯಾಪ್ತಿ ಮತ್ತು ಹೆಚ್ಚು ಸ್ಥಿರವಾದ ವಿತರಣೆಗೆ ಬೆಂಬಲ ನೀಡಬಹುದು.

**ಮಕ್ಕಳ ಅಭಿವೃದ್ಧಿ, ಶಿಕ್ಷಣ ಮತ್ತು ರಕ್ಷಣೆ**

ಮಿಷನ್ ವಾತ್ಸಲ್ಯ ಯೋಜನೆಯಲ್ಲಿ ಶೇ. 3.33 ರಷ್ಟು ಅಲ್ಪ ಏರಿಕೆ ಕಂಡುಬಂದಿದ್ದು, 1,550 ಕೋಟಿಗಳಿಗೆ ತಲುಪಿದೆ. ಸಮಗ್ರ ಶಿಕ್ಷಣ ಅಭಿಯಾನಕ್ಕೆ 42,100 ಕೋಟಿಗಳನ್ನು ಹಂಚಿಕೆ ಮಾಡಲಾಗಿದ್ದು, ಇದು ಕಳೆದ ವರ್ಷಕ್ಕಿಂತ ಶೇ. 2.06 ರಷ್ಟು ಹೆಚ್ಚಳವಾಗಿದೆ. ಆಶಾದಾಯಕವಾಗಿ, ಏಕಲವ್ಯ ಮಾದರಿ ವಸತಿ ಶಾಲೆಗಳ ಅನುದಾನವು ಶೇ. 20 ಕ್ಕಿಂತ ಹೆಚ್ಚು ಅಂದರೆ 7,200 ಕೋಟಿಗಳಿಗೆ ಗಣನೀಯವಾಗಿ ಏರಿಕೆಯಾಗಿದೆ, ಇದು ಬುಡಕಟ್ಟು ಮಕ್ಕಳ ಶಿಕ್ಷಣದ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಲಾಗಿದೆ ಎಂಬುದನ್ನು ಪ್ರತಿಬಿಂಬಿಸುತ್ತದೆ. ನವೋದಯ ವಿದ್ಯಾಲಯಗಳು ಮತ್ತು ಕೇಂದ್ರೀಯ ವಿದ್ಯಾಲಯಗಳು ಸಹ ಹೆಚ್ಚಿನ ಅನುದಾನವನ್ನು ಪಡೆದಿವೆ.

2026–27ರಲ್ಲಿ ಅಟಲ್ ಟಿಂಕರಿಂಗ್ ಲ್ಯಾಬ್‌ಗಳಿಗಾಗಿ 3,200 ಕೋಟಿಗಳ ಬೃಹತ್ ಹಂಚಿಕೆಯು ಸರ್ಕಾರಿ ಶಾಲೆಗಳಲ್ಲಿ ನಾವೀನ್ಯತೆ ಮತ್ತು ವೈಜ್ಞಾನಿಕ ಮನೋಭಾವಕ್ಕೆ ನೀಡುತ್ತಿರುವ ಹೊಸ ಒತ್ತುವನ್ನ ಸೂಚಿಸುತ್ತದೆ. ಹಾಗೆಯೇ, ಮಕ್ಕಳ ಬಜೆಟ್‌ನಲ್ಲಿ 'ಸ್ಕಿಲ್ ಇಂಡಿಯಾ' ಕಾರ್ಯಕ್ರಮವನ್ನು ಸೇರಿಸಿರುವುದು ವೃತ್ತಿಪರ ಶಿಕ್ಷಣವನ್ನು ಆರಂಭಿಕ ಹಂತದಲ್ಲೇ ಸಂಯೋಜಿಸುವ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಕ್ಕೆ ಪೂರಕವಾಗಿದೆ.

ಆದಾಗ್ಯೂ, ಅಂಚಿನಲ್ಲಿರುವ ಸಮುದಾಯಗಳ ಮಕ್ಕಳಿಗಾಗಿನ ಹಲವಾರು ವಿದ್ಯಾರ್ಥಿವೇತನ ಯೋಜನೆಗಳು ಹೆಚ್ಚೂಕಡಿಮೆ ಸ್ಥಗಿತಗೊಂಡಿವೆ. ಪರಿಶಿಷ್ಟ ಜಾತಿಯ ಮಕ್ಕಳ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಹಂಚಿಕೆಯಲ್ಲಿ ಯಾವುದೇ

# ಚಾಲನಾ ವೃತ್ತಿ ತಾಳ್ಮೆ ಹಾಗೂ ಏಕಾಗ್ರತೆ ಬಯಸುವ ಕಾಯಕವಾಗಿದೆ: ಎಸಿಪಿ ನಿಕಿತಾ

ಕೆಂಗೇರಿ: ಚಾಲನಾ ವೃತ್ತಿ ತಾಳ್ಮೆ ಹಾಗೂ ಏಕಾಗ್ರತೆ ಬಯಸುವ ಕಾಯಕವಾಗಿದೆ. ಸಂಚಾರಿ ನಿಯಮಗಳನ್ನು ಪಾಲಿಸುವ ಮೂಲಕ ಸಂಭಾವ್ಯ ಅವಘಡಗಳನ್ನು ತಪ್ಪಿಸಬಹುದು ಎಂದು ವಿಜಯನಗರ ಸಂಚಾರ ವಿಭಾಗದ ಎಸಿಪಿ ನಿಕಿತಾ ಹೇಳಿದರು.

ರಸ್ತೆ ಸುರಕ್ಷತಾ ಸಪ್ತಾಹದ ಭಾಗವಾಗಿ ರಾಜ್ಯ ಸಾರಿಗೆ ಇಲಾಖೆ ಸಹಯೋಗದಲ್ಲಿ ಎಲ್ ವಿ ಟ್ರಾವೆಲ್ಸ್ ವತಿಯಿಂದ ಆಯೋಜಿಲಾಗಿದ್ದ ಆಯೋಜಿಸಲಾಗಿದ್ದ "ಸಡಕ್ ಸುರಕ್ಷಾ ಜೀವನ ರಕ್ಷಾ" ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಸುರಕ್ಷಿತ ಪ್ರಯಾಣವನ್ನು ಖಾತ್ರಿ ಪಡಿಸುವ ನಿಟ್ಟಿನಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಹಲವಾರು ಸಂಚಾರಿ ನಿಯಮಗಳನ್ನು ಜಾರಿಗೆ ತಂದಿದೆ. ಈ ಮೊದಲು ಕುಡಿದು ಚಾಲನೆ ಮಾಡುವವರ ವಿರುದ್ಧ ಪ್ರಕರಣ ದಾಖಲು ಮಾಡಿ ಚಾಲನಾ ಪರವಾನಗಿ ರದ್ದು ಮಾಡಲಾಗುತ್ತಿತ್ತು. ಬದಲಾದ ಸಂಚಾರಿ ಕಾಯ್ದೆಗಳನ್ವಯ ಸಿಗ್ನಲ್ ಜಂಪಿಂಗ್, ಚಾಲನೆಯ ವೇಳೆ ಮೊಬೈಲ್ ಬಳಕೆ, ಅತಿ ವೇಗ ಪ್ರಕರಣಗಳಲ್ಲೂ ಲೈಸನ್ಸ್ ರದ್ದು ಮಾಡಲು ಅವಕಾಶವಿದೆ. ಚಾಲಕರು ಸಂಚಾರಿ ನಿಯಮಗಳನ್ನು ಪಾಲಿಸುವ ಮೂಲಕ ಸಮಾಜದ ಸ್ವಾಸ್ಥ್ಯ ಕಾಪಾಡಬೇಕು. ಅಪಘಾತದಿಂದ ತಪ್ಪಿತಸ್ಥರೊಂದಿಗೆ ಅಮಾಯಕರ ಪ್ರಾಣಕ್ಕೂ ತೊಂದರೆಯಾಗಲಿದೆ ಎಂಬ ಅರಿವು ಎಲ್ಲರಿಗೆ ಇರಬೇಕು ಎಂದು ಕಿವಿಮಾತು ಹೇಳಿದರು.

ಆರ್ ಟಿ ಒ ಪ್ರವೀಣ್ ಮಾತನಾಡಿ, ಸರ್ಕಾರಿ ವರದಿಗಳ ಪ್ರಕಾರ 2023ನೇ ಸಾಲಿನಲ್ಲಿ 4,80,000 ಕ್ಕಿಂತಲೂ ಹೆಚ್ಚು ಅಪಘಾತ ಪ್ರಕರಣಗಳು ದಾಖಲಾಗಿದೆ. 1,72,890 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಅವಸರ ಹಾಗೂ ಅಜಾಗರೂಕತೆ, ಸಂಚಾರಿ ನಿಯಮಗಳ ಉಲ್ಲಂಘನೆಯೇ ಅಪಘಾತಗಳಿಗೆ ಮೂಲ ಕಾರಣವಾಗಿದೆ ಎಂದು ಬೇಸರ ವ್ಯಕ್ತ ಪಡಿಸಿದರು. ಎಲ್ ವಿ ಟ್ರಾವೆಲ್ಸ್ ಮಾಲೀಕರಾದ ಪರಮಶಿವಯ್ಯ, ಚಾಲಕರ ಸುರಕ್ಷತೆಗಾಗಿ ಇಂತಹ ಕಾರ್ಯಕ್ರಮ ರೂಪಿಸಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು.

ಅವಘಡ ಸಂಭವಿಸಿದ ಕೂಡಲೆ ಚಿಕಿತ್ಸೆ ದೊರೆತರೆ ಪ್ರಾಣ ಉಳಿಯುವ ಸಂಭವನೀಯತೆ ಹೆಚ್ಚು. ಹೀಗಾಗಿ ಯಾವುದೇ ಆಲೋಚನೆ ಮಾಡದೆ ಅಪಘಾತಕ್ಕೆ ಒಳಗಾದವರನ್ನು ಆಸ್ಪತ್ರೆಗೆ ದಾಖಲಿಸಬೇಕು. ಅಂತಹ ವ್ಯಕ್ತಿಗಳು ಯಾವುದೇ ಕಾನೂನಿನ ತೊಡಕು ಉಂಟಾಗುವುದಿಲ್ಲ. ಬದಲಿಗೆ ಅಂತಹವರನ್ನು ಗುರುತಿಸಿ ಸರ್ಕಾರದ ವತಿಯಿಂದ ಪುರಸ್ಕರಿಸಲಾಗುವುದು ಎಂದು ಆರ್ ಟಿ ಒ ವಿವೇಕಾನಂದ ಮಾಹಿತಿ ನೀಡಿದರು.

ಆರ್ ಟಿ ಒ ಮಂಜುನಾಥ್, ಕಾಮಾಕ್ಷಿಪಾಳ್ಯ ಸಿಪಿಐ ಯೋಗೀಶ್, ಜ್ಞಾನಭಾರತಿ ಠಾಣೆ ಸಿಪಿಐ(ಸಂ) ಪ್ರೀತಂ, ಅನ್ನಪೂರ್ಣೇಶ್ವರಿನಗರ ಠಾಣೆ ಸಿಪಿಐ ಲತೇಶ್ ಕುಮಾರ್, ಎಲ್ ವಿ ಟ್ರಾವೆಲ್ಸ್ ನಿರ್ದೇಶಕರಾದ ನಾರಾಯಣಸ್ವಾಮಿ, ಸಿಇಒ ಸುದರ್ಶನ್, ವಿಷ್ಣು, ಮುತ್ತುರಾಜ್ ಹಾಗೂ ಎಲ್ ವಿ ಟ್ರಾವೆಲ್ಸ್ ನ ಸುಮಾರು 800ಕ್ಕೂ ಹೆಚ್ಚು ಚಾಲಕರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



# ಉದ್ದಿಮೆ ಪರವಾನಿಗೆ ಶುಲ್ಕದ ಶೇ. 100 ರಷ್ಟು ದಂಡದ ಮೊತ್ತದೊಂದಿಗೆ ಪರವಾನಿಗೆ ಶುಲ್ಕ

**ಬೆಂಗಳೂರು :** ಗ್ರೇಟರ್ ಬೆಂಗಳೂರು ಪ್ರಾಧಿಕಾರದ 05 ಬೆಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ 2026-27 ನೇ ಸಾಲಿನ ಉದ್ದಿಮೆ ಪರವಾನಿಗೆ ನವೀಕರಣ ಕಾರ್ಯಕ್ಕೆ ಸಂಬಂಧಿಸಿದಂತೆ ಮುಖ್ಯ ಆಯುಕ್ತರಾದ ಮಹೇಶ್ವರ್ ರಾವ್ ಸುತ್ತೋಲೆ ಹೊರಡಿಸಿದ್ದಾರೆ.



ಉದ್ದಿಮೆದಾರರ ಅನುಕೂಲಕ್ಕೆ ತಕ್ಕಂತೆ 1 ರಿಂದ 5 ಆರ್ಥಿಕ ವರ್ಷಗಳ ಅವಧಿಗೆ (ಏಪ್ರಿಲ್ ನಿಂದ ಮಾರ್ಚ್) ನವೀಕರಣ ಮಾಡಲು ಸೂಚಿಸಬಹುದಾಗಿದೆ. ನವೀಕರಣ ಶುಲ್ಕವನ್ನು ಉದ್ದಿಮೆದಾರರು ಕೋರುವ ಆರ್ಥಿಕ ವರ್ಷಕ್ಕೆ ಮಿತಿಗೊಳಿಸಿ ಪಾವತಿಸಿಕೊಳ್ಳಲು ಸೂಚಿಸಬಹುದಾಗಿದೆ.

ಕಳೆದ ಸಾಲಿನಂತೆ ಉದ್ದಿಮೆ ಪರವಾನಿಗೆ ಶುಲ್ಕವನ್ನು ಆನ್‌ಲೈನ್ ಮುಖಾಂತರ ಹಾಗೂ ಬ್ಯಾಂಕ್ ಚಲನ್ ಮೂಲಕ ಕೆನರಾ ಬ್ಯಾಂಕಿನಲ್ಲಿ ಪಾವತಿಸಿಕೊಳ್ಳಬೇಕಿದೆ.

ದಿನಾಂಕ :ಫೆಬ್ರುವರಿಯು 01 ರಿಂದ ಫೆಬ್ರುವರಿಯು 28 ರವರೆಗೆ ದಂಡವಿಲ್ಲದೇ ಪರವಾನಗಿ ಶುಲ್ಕವನ್ನು ಪಾವತಿಸಿಕೊಳ್ಳಬೇಕಿದೆ.

**ದಿನಾಂಕ :** ಮಾರ್ಚ್ 01 ರಿಂದ ಮಾರ್ಚ್ 31 ರವರೆಗೆ ಪರವಾನಿಗೆ ನವೀಕರಣ ಶುಲ್ಕದ ಶೇಕಡಾ 25% ರಷ್ಟು ದಂಡ ಮೊತ್ತದೊಂದಿಗೆ ಪರವಾನಿಗೆ ಶುಲ್ಕವನ್ನು ಪಾವತಿಸಿಕೊಳ್ಳಬೇಕಿದೆ.

**ದಿನಾಂಕ :** ಏಪ್ರಿಲ್ 01 ರಿಂದ ಉದ್ದಿಮೆ ಪರವಾನಿಗೆ ಶುಲ್ಕದ ಶೇಕಡಾ 100% ರಷ್ಟು ದಂಡದ ಮೊತ್ತದೊಂದಿಗೆ ಪರವಾನಿಗೆ ಶುಲ್ಕವನ್ನು ಪಾವತಿಸಿಕೊಳ್ಳಬೇಕಿದೆ.

ಪರವಾನಿಗೆ ನವೀಕರಣ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಆನ್‌ಲೈನ್ ಮುಖಾಂತರವೇ ಮಾಡಲು ಸೂಚಿಸಬಹುದಾಗಿದೆ.

**ವಲಯ ವರ್ಗೀಕರಣ ನಿಯಮಾವಳಿಯಂತೆ:**

ವಸತಿ ಪ್ರದೇಶದಲ್ಲಿ 40 ಅಡಿ ಅಗಲಕ್ಕಿಂತ ಕಡಿಮೆ ಇರುವ ರಸ್ತೆಗಳಲ್ಲಿ 2015ರ ನಂತರ ಪ್ರಾರಂಭವಾಗಿರುವ ಉದ್ದಿಮೆ ಪರವಾನಿಗೆಯನ್ನು ತಡೆಹಿಡಿದು ಹಿಂಬರಹ ನೀಡಿ ತಿರಸ್ಕರಿಸುವುದು.

ವಸತಿ ಪ್ರದೇಶದಲ್ಲಿ 40 ಅಡಿ ಅಗಲಕ್ಕಿಂತ ಜಾಸ್ತಿಯಿರುವ ರಸ್ತೆಗಳಲ್ಲಿ 2015ರ ನಂತರ ಪ್ರಾರಂಭವಾಗಿರುವ ಉದ್ಯಮಗಳನ್ನು ಮತ್ತು ನಿಗಧಿಪಡಿಸಿರುವ ಉದ್ದಿಮೆಗಳಿಗೆ ಮಾತ್ರ ವಿಸ್ತೀರ್ಣಕ್ಕೆ ಸೀಮಿತಗೊಳಿಸಿ, ಇತರೆ ಉದ್ದಿಮಗಳ ಪರವಾನಿಗೆ ನವೀಕರಣವನ್ನು ತಡೆಹಿಡಿದು ಹಿಂಬರಹ ನೀಡಿ ತಿರಸ್ಕರಿಸುವುದು.

**ಕಟ್ಟಡ ನಿಯಮಾವಳಿಯಂತೆ:**

ಉದ್ದಿಮೆಯು ಅನಧಿಕೃತವಾಗಿ ನಕ್ಷೆ ಉಲ್ಲಂಘನೆಯಾಗಿ ನಿರ್ಮಿಸಿರುವ ಕಟ್ಟಡಗಳಲ್ಲಿ ಪೂರ್ತಿ ಅಥವಾ ಭಾಗಶಃ ಬಳಸುತ್ತಿರುವ ಬಗ್ಗೆ ದೂರುಗಳಿದ್ದಲ್ಲಿ, ವಾಹನ ನಿಲುಗಡೆ ಪ್ರದೇಶದಲ್ಲಿ ಅಥವಾ ರೂಫ್ ಟಾಪ್‌ಗಳಲ್ಲಿ ನಡೆಸುತ್ತಿದ್ದಲ್ಲಿ ಪರವಾನಿಗೆ ನವೀಕರಣವನ್ನು ತಡೆಹಿಡಿದು ಹಿಂಬರಹ ನೀಡಿ ತಿರಸ್ಕರಿಸಲು ತಿಳಿಸಬಹುದಾಗಿರುತ್ತದೆ.

**ಘನತ್ಯಾಜ್ಯ ಮತ್ತು ಸಾರ್ವಜನಿಕ ಆರೋಗ್ಯ ನಿಯಮಾವಳಿಯಂತೆ:**

100 ಕೆ.ಜಿ.ಗಿಂತ ಹೆಚ್ಚಾಗಿ ತ್ಯಾಜ್ಯ ಉತ್ಪತ್ತಿ ಮಾಡುವ ಉದ್ದಿಮೆಗಳಿಂದ ಮೂಲ ಸ್ಥಳದಲ್ಲಿ ತ್ಯಾಜ್ಯ ಸಂಸ್ಕರಣೆ ಹಾಗೂ ವಿಲೇವಾರಿಗೆ ಸಂಬಂಧಿಸಿದ ದಾಖಲಾತಿಗಳನ್ನು ಪಡೆದು ಅಥವಾ Empaneled Vendorಗೆ ನೀಡುತ್ತಿದ್ದ ಪಕ್ಷದಲ್ಲಿ ಎಲ್ಲಾ ವಿಧದ ತ್ಯಾಜ್ಯಗಳ ವಿಲೇವಾರಿಗೆ ಅವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ಪ್ರತಿಯನ್ನು ಪಡೆದು ನವೀಕರಿಸುವುದು.

ಉಲ್ಲೇಖ ಪತ್ರದಂತೆ ಕಛೇರಿ ಆದೇಶವನ್ನು ಪಾಲಿಸುತ್ತಿರುವ ಬಗ್ಗೆ ಕಲ್ಯಾಣ ಮಂಟಪ ಉದ್ದಿಮೆದಾರರಿಂದ ಲಿಖಿತ ಹೇಳಿಕೆ ಪಡೆದು ಸದರಿ ಕಛೇರಿ ಆದೇಶವನ್ನು ಸ್ಥಳದಲ್ಲಿ ಪ್ರದರ್ಶಿಸಿರುವ ಛಾಯಾ ಚಿತ್ರವನ್ನು ಪಡೆದು ನವೀಕರಿಸುವುದು.

ಹೋಟೆಲ್ / ರೆಸ್ಟೋರೆಂಟ್ ಮತ್ತು ಆಹಾರ ಸರಬರಾಜು ಮಾಡುವ ಉದ್ದಿಮೆಗಳು ಕಡ್ಡಾಯವಾಗಿ ಪ್ಲಾಸ್ಟಿಕ್ ನಿಷೇಧವನ್ನು ಪಾಲಿಸುವ ಕುರಿತು ಲಿಖಿತ ಹೇಳಿಕೆ ಪಡೆದುಕೊಳ್ಳುವುದು.

ಉದ್ದಿಮೆ ಸ್ಥಳಗಳಲ್ಲಿ ಪ್ಲಾಸ್ಟಿಕ್ ನಿಷೇಧ ಬಗ್ಗೆ ಹಾಗೂ ಒಮ್ಮೆ ಬಳಸಿ ಬಿಸಾಡುವ ಸಾಮಗ್ರಿಗಳನ್ನು ಉಪಯೋಗಿಸದಂತೆ ಭಿತ್ತಿ ಪತ್ರಗಳನ್ನು ಪ್ರದರ್ಶಿಸಲು ಸೂಚಿಸುವುದು.

ಉದ್ದಿಮೆ ಸ್ಥಳಗಳಲ್ಲಿ ಹಸಿ ಕಸಕ್ಕೆ (ಹಸಿರು ಬಣ್ಣ) ಮತ್ತು ಒಣ ಕಸಕ್ಕೆ (ನೀಲಿ ಬಣ್ಣ) ಪ್ರತ್ಯೇಕ ಕಸದ ಬುಟ್ಟಿಗಳನ್ನು ಇಟ್ಟುಕೊಂಡು ವೈಜ್ಞಾನಿಕವಾಗಿ ಅದನ್ನು ವಿಲೇವಾರಿ ಮಾಡುವುದು.

ಅದರಂತೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ 05 ಬೆಂಗಳೂರು ನಗರ ಪಾಲಿಕೆಗಳ ಆರೋಗ್ಯಾಧಿಕಾರಿಗಳು, ಉಪ ಆರೋಗ್ಯಾಧಿಕಾರಿಗಳು, ಆರೋಗ್ಯ ವೈದ್ಯಾಧಿಕಾರಿಗಳು ಯಾವುದೇ ಗೊಂದಲಕ್ಕೆ ಆಸ್ಪದವಿಲ್ಲದಂತೆ ಮೇಲಿನ ಅಂಶಗಳನ್ನು ಪರಿಗಣಿಸಿ, 2026-27ನೇ ಸಾಲಿನ ನವೀಕರಣವನ್ನು ಹಮ್ಮಿಕೊಳ್ಳಲು ಸೂಚಿಸಿದೆ. ಅಲ್ಲದೆ ಪಾಲಿಕೆಯ ಉದ್ದಿಮೆ ಪರವಾನಿಗೆ ತಂತ್ರಾಂಶದಲ್ಲಿ 2026-27 ನೇ ಸಾಲಿನ ನವೀಕರಣಕ್ಕೆ ಸಂಬಂಧಿಸಿದಂತೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.

# ಕಲಾರತ್ನ ಡಾಕ್ಟರ್ ಆಚಾರ್ಯ ಪ್ರತಿಷ್ಠಾನ ಪೌಂಡೇಶನ್ ಉದ್ಘಾಟನಾ ಸಮಾರಂಭ

ಕಲಾರತ್ನ ಡಾಕ್ಟರ್ ಎಸ್ ಪಿ ಆಚಾರ್ಯ ಸಾಹಿತ್ಯದಲ್ಲಿ ಆಚಾರ್ಯ ಪ್ರತಿಷ್ಠಾನ ಪೌಂಡೇಶನ್ ಉದ್ಘಾಟನಾ ಸಮಾರಂಭ ದಿನಾಂಕ 26/01/2026 ಸೋಮವಾರ ಉದ್ಘಾಟನೆ ಬೆಂಗಳೂರು ರತ್ನ ಡಾ. ಅಂಬರೀಶ್ ಜಿ ಬಿಜೆಪಿ ಮುಖಂಡರು ದಾರಿ ಆಂಜನೇಯ ಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳು ಮುಖ್ಯ ಅತಿಥಿಗಳು ಜಾನಪದ ಗಾನ ತಿಲಕ ಸನ್ಮಾನ್ಯ ಶ್ರೀ ಚಲನಚಿತ್ರ ನಟರು ಶ್ರೀ ಗುರುರಾಜ್ ಹೊಸಕೋಟೆ ಸನ್ಮಾನ್ಯ ಶ್ರೀ ಮೈಕೋ ನಾಗರಾಜ್ ರವರು ಚಲನಚಿತ್ರ ನಟರು ಸನ್ಮಾನ್ಯ ಶ್ರೀ ಎಸ್ಕಾರ್ಟ್ ಶ್ರೀನಿವಾಸ್ ರವರು ಚಲನಚಿತ್ರ ನಟರು ಸನ್ಮಾನ್ಯ ಶ್ರೀ ಜ್ಯೋತಿರ್ ವಿದ್ಯಾ ವಾಚಸ್ಪತಿ ಜ್ಯೋತಿಷ್ಯ ಭೂಷಣ ಕುಮಾರವಸಿಷ್ಠ ಸನ್ಮಾನ್ಯ ಶ್ರೀ ಸುರೇಶ್ ಬಾಬುರವರು ಚಲನಚಿತ್ರ ನಟರು ಸನ್ಮಾನ್ಯ ಶ್ರೀ ಗಣೇಶ್ ಗೌಡರು ಕರ್ನಾಟಕ ಮಾನವ ಹಕ್ಕುಗಳ ಸಂರಕ್ಷಣಾ ಸಂಸ್ಥೆಯ ರಾಜ್ಯಾಧ್ಯಕ್ಷರು ಸನ್ಮಾನ್ಯ ಶ್ರೀ ಎಪಿ ಕರಾಟೆ ಶ್ರೀನಾಥ್ ರವರು ಗಿನ್ನಿಸ್ ದಾಖಲೆ ಪುರಸ್ಕೃತರು ಸನ್ಮಾನ್ಯ ಶ್ರೀ ದಯಾನಂದ ಮೂರ್ತಿಯವರು ಪ್ರಗತಿಪರ ರೈತರು ಚಳ್ಳಕೆರೆ ಸನ್ಮಾನ್ಯ ಶ್ರೀ ಲೆಮನ್ ಪರಶುರಾಮ್ ರವರು ಚಲನಚಿತ್ರ ನಿರ್ದೇಶಕರು ಸನ್ಮಾನ್ಯ ಶ್ರೀ ಬದ್ರಿ ಚಲನಚಿತ್ರ ನಟರು ಸನ್ಮಾನ್ಯ ಶ್ರೀ ಕನ್ನಡ ಪರ್ವಿಜ್ ಪಾಷಾ ರವರು ಕರ್ನಾಟಕ ಪಕ್ಷಿಕ ಪತ್ರಿಕೆ ಪ್ರಧಾನ ಸಂಪಾದಕರು ಸನ್ಮಾನ್ಯ ಶ್ರೀ ಸಲ್ಮಾನ್ ರವರು ಕರುನಾಡ ನಿಧಿ ಪತ್ರಿಕೆ ಪ್ರಧಾನ ಸಂಪಾದಕರು ಇನ್ನೂ ಹಲವಾರು ಗಣ್ಯ ಅತಿಥಿಗಳು ಭಾಗವಹಿಸಿದ್ದರು ಈ ಕಾರ್ಯಕ್ರಮದಲ್ಲಿ ಆಚಾರ್ಯ ಪ್ರತಿಷ್ಠಾನ ಫೌಂಡೇಶನ್ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಕಲಾರತ್ನ ಡಾ.ಎಸ್. ಪಿ. ಆಚಾರ್ಯ ಉಪಾಧ್ಯಕ್ಷರಾದ ಅನುಷ ರೆಡ್ಡಿ ಹಾಗೂ ಸಂಘದ ಪದಾಧಿಕಾರಿಗಳು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು ಸ್ಥಳ ಗಾನ ಪಲ್ಲವಿ ಆಡಿಟೋರಿಯಂ ಕನ್ಯಾಕುಮಾರಿ ಶಾಲೆಯಿಂದ ಬಾಲಗಂಗಾಧರ ನಗರ ಮಲ್ಲತ್ತಹಳ್ಳಿ ಬೆಂಗಳೂರು







# ಕೆಂಗೇರಿ ಕೋಟೆಗೆ ಸಾರ್ವಜನಿಕರ ಅಭಿಪ್ರಾಯ ಪಡೆದು ಹೆಸರಿಡಲಾಗಿದೆ

ಯಶವಂತಪುರ : ಕೆಂಗೇರಿ ಕೋಟೆ ಐತಿಹಾಸಿಕ ಹಿನ್ನೆಲೆ ಹೊಂದಿದ್ದು, ವಾರ್ಡ್ ಹೆಸರು ನಿಗದಿ ಮಾಡುವ ವೇಳೆ ಸಾರ್ವಜನಿಕರ ಅಭಿಪ್ರಾಯ ಪಡೆದು ಸೂಕ್ತವಾದ ಹೆಸರಿಡಲಾಗಿದೆ ಎಂದು ಜಯ ಪ್ರಕಾಶ್ ನಾರಾಯಣ ವೇದಿಕೆ ಅಧ್ಯಕ್ಷ ಚಾಮುಂಡಿ ಶಿವಕುಮಾರ್ ತಿಳಿಸಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ಗಳ ಹೆಸರು ಅಂತಿಮಗೊಳಿಸಿ ಜಿಬಿಎ ಸಿದ್ದ ಪಡಿಸಿರುವ ಪಟ್ಟಿಯಿಂದ ಕೆಂಗೇರಿ ಕೋಟೆ ಹೆಸರನ್ನು ಕೈ ಬಿಡದಂತೆ ಒತ್ತಾಯಿಸಿ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು ಕೆಲ ನಾಗರೀಕರು ಕೆಂಗೇರಿ ಕೋಟೆ ಬದಲು ಹೆಮ್ಮಿಗೆಪುರದ ಹೆಸರನ್ನೇ ಇಡಲು ಒತ್ತಾಯಿಸಿ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ. ಭೌಗೋಳಿಕವಾಗಿ ಹೆಮ್ಮಿಗೆಪುರ ಕೆಂಗೇರಿ ಹೋಬಳಿಯ ಭಾಗವಾಗಿದೆ. ಕೆಂಗೇರಿ ಕೋಟೆಗೆ ಗೆ ಶತಮಾನಗಳ ಇತಿಹಾಸವಿದೆ. ಭಾವನಾತ್ಮವಾಗಿ ಸುತ್ತ ಮುತ್ತಲ ಗ್ರಾಮದ ಜನರು ಗುರುತಿಸಿಕೊಂಡಿದ್ದು, ಜನಸಂಖ್ಯೆ ಆಧಾರದಲ್ಲೂ ಕೆಂಗೇರಿ ಕೋಟೆ ವಾರ್ಡ್ ಎನಿಸಲು ಸೂಕ್ತವಾಗಿದೆ ಎಂದರು.

ಕೆಂಗೇರಿ ವಾರ್ಡ್ ಅಧ್ಯಕ್ಷ ಟಿ.ಪ್ರಭಾಕರ್ ಮಾತನಾಡಿ, ಬೂತ್ ಸಂಖ್ಯೆ,ಮನೆಗಳ ಸಂಖ್ಯೆ, ವಿದ್ಯುತ್ ಮೀಟರ್ ಸಂಖ್ಯೆ ಸೇರಿದಂತೆ ವಾರ್ಡ್ ನ ಜನಸಂಖ್ಯೆ ನಿರ್ಧರಿಸುವ ಅಗತ್ಯ ದಾಖಲೆ ಸಂಗ್ರಹಿಸಿ ಕೆಂಗೇರಿ ಭಾಗದಿಂದ ಪಿಐಎಲ್ ಅರ್ಜಿ ಸಲ್ಲಿಸಲಾಗುವುದು ಎಂದರು.

ಹೆಮ್ಮಿಗೇಪುರ, ಸೋಂಪುರ ಸೇರಿದಂತೆ ನೂರಾರು ಗ್ರಾಮಗಳಿಗೆ ಕೆಂಗೇರಿ ಹೋಬಳಿ ತಾಯಿ ಇದ್ದಂತೆ. ನಮ್ಮ ಗುರುತು ಕೆಂಗೇರಿಯೊಂದಿಗೆ ಬೆಸೆದು ಕೊಂಡಿದೆ. ಈ ಅಸ್ಮಿತೆಯನ್ನು ಅಳಿಸುವ ಕಾರ್ಯಕ್ಕೆ ನಮ್ಮ ಪ್ರಬಲ ವಿರೋಧವಿದ್ದು, ಹೆಸರು ಬದಲಾವಣೆಗೆ ಮುಂದಾದರೆ ಮುಂದಿನ ದಿನಗಳಲ್ಲಿ ಸಮಸ್ತ ನಾಗರಿಕರು ಹೋರಾಟಕ್ಕೆ ಮುಂದಾಗಬೇಕಾಗುತ್ತದೆ" ಎಂದು ಸ್ಥಳೀಯ ಮುಖಂಡ ಚೇತನ್ ಗೌಡ ಎಚ್ಚರಿಸಿದರು.



ಸ್ಥಳೀಯ ಮುಖಂಡರಾದ ಕೆ. ಆರ್. ಸತ್ಯನಾರಾಯಣ, ಕೆ. ವೈ. ಕೃಷ್ಣ,ಕೆ.ಆರ್.ಮೂರ್ತಿ,ಎಂ.ಹರೀಶ್ ಕುಮಾರ್, ಅನುಪಮಾ ಪಂಚಾಕ್ಷರಿ, ಪಾರ್ವತಿ,ಪರಮೇಶಿ, ಗುರುದೇವ್ , ಶೈಲೇಶ್, ಆನಂದ್, ಕಾಂತ, ನಿಖಿಲ್, ಸುಭಾಷ್,ಲೋಹಿತ್ ಮತ್ತಿತರರು ಇದ್ದರು.

# ಬಲಿಷ್ಠ ಹಿಂದೂ ದೇಶ ಕಟ್ಟಲು ಮುಂದಾಗಿ: ಜಗದ್ಗುರು ಕೃಷ್ಣ ಯಾದವಾನಂದ ಸ್ವಾಮೀಜಿ

ಯಶವಂತಪುರ : ಹಿಂದೂ ಸಮಾಜ್ಯೋತ್ಸವ ಧರ್ಮದ ವಿರುದ್ಧ ಸಮರ ಸಾರುವುದಕ್ಕೆ ಅಲ್ಲ, ನಮ್ಮಲ್ಲಿನ ಎಲ್ಲಾ ಜಾತಿಗಳನ್ನು ಒಗ್ಗೂಡಿಸಿಕೊಂಡು ಬಲಿಷ್ಠ ಹಿಂದೂ ದೇಶ ಕಟ್ಟಲು ಮುಂದಾಗಿ ಎಂದು ಚಿತ್ರದುರ್ಗದ ಅಖಿಲ ಭಾರತ ಶ್ರೀಕೃಷ್ಣ ಯಾದವ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಜಗದ್ಗುರು ಕೃಷ್ಣ ಯಾದವಾನಂದ ಸ್ವಾಮೀಜಿ ಕರೆ ನೀಡಿದರು.

ಕೆಂಗೇರಿ ಉಪನಗರದ ವಳಗೇರಹಳ್ಳಿ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಆವರಣದ ಹಿಂದೂ ಸಮಾಜ್ಯೋತ್ಸವದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಅವರು ಸಂಸ್ಕೃತಿ ಉಳಿವು, ಸಮಾಜದ ಏಕತೆ ಮತ್ತು ಧಾರ್ಮಿಕ ಜಾಗೃತಿಗಾಗಿ ಇಂತಹ ಕಾರ್ಯಕ್ರಮಗಳನ್ನು ಹೆಚ್ಚೆಚ್ಚು ಆಯೋಜನೆ ಮೂಲಕ ಹಿಂದೂಗಳನ್ನು ಒಗ್ಗೂಡಿಸಬೇಕು ಎಂದರು.

ಶ್ರೀಗಳನ್ನು ಶಿರ್ಕೆ ಶ್ರೀಕೃಷ್ಣ ದೇವಸ್ಥಾನದಿಂದ ಡೋಲು ಕುಣಿತ ವಾದ್ಯದ ಮೂಲಕ ಕಳಸ ಹೊತ್ತ ಮಹಿಳೆಯರು ಸೇರಿದಂತೆ ನೂರಾರು ಸಂಖ್ಯೆಯಲ್ಲಿ ಹಿಂದೂ ಬಾಂಧವರು ಶೋಭಾಯಾತ್ರೆಯ ಮೂಲಕ ವೇದಿಕೆ ಕಾರ್ಯಕ್ರಮಕ್ಕೆ ಕರೆತಂದರು.ದಿಕ್ಸೂಚಿ ಭಾಷಣವನ್ನು ಸಾಮಾಜಿಕ ಹೋರಾಟಗಾರ ವಸಂತ್ ಗಿಳಿಯಾರ್ ಮಾಡಿದರು.

ಕೋಟೆ ಮಾರಮ್ಮ ದೇವಸ್ಥಾನದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೇಲಿಮಠ ಮಹಾಸಂಸ್ಥಾನದ ಶಿವಾನುಭವ ಚರಮೂರ್ತಿ ಶಿವರುದ್ರ ಮಹಾಸ್ವಾಮಿ , ಕೆಂಗೇರಿ ಉಪನಗರದ ಪೂನಂ ಮಹಲ್ ಕಾರ್ಯಕ್ರಮದಲ್ಲಿ ರಾಮೋ ಹಳ್ಳಿ ಆರೂಢ ಭಾರತಿ ತೀರ್ಥ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು.

ಪಾಲಿಕೆ ಮಾಜಿ ಸದಸ್ಯರಾದ ರ.ಆಂಜಿನಪ್ಪ, ವಿವಿ ಸತ್ಯನಾರಾಯಣ್, ಜೆ.ರಮೇಶ್, ನಾಗರಾಜ್, ನವೀನ್ ಯಾದವ್, ಸಂತೋಷ್, ಎನ್.ಕದರಪ್ಪ, ಹಿಂದೂ ಸಮಾಜ್ಯೋತ್ಸವ ಆಯೋಜನಾ ಸಮಿತಿಯ ಅಧ್ಯಕ್ಷ ಎಂ.ಮುನಿಆಂಜಿನಪ್ಪ, ಉಪಾಧ್ಯಕ್ಷ ಕೆ.ಪಿ.ಕೃಷ್ಣ, ಶಿವನಂಜಪ್ಪ , ವಿಶ್ವನಾಥ್ ರೆಡ್ಡಿ, ರಾಜೇಶ್, ಪ್ರವೀಣ್ ಇಟಗಿ, ಸುಕನ್ಯಾ ಹೆಗಡೆ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.




# 400 ಕೋಟಿ ರೂ. ದರೋಡೆ ಪ್ರಕರಣ: ಆರೋಪಿ ಕಿಶೋರ್ ಶರಣಾಗತಿ, ಬಿಗ್ ಟ್ವಿಸ್ಟ್

ಬೆಳಗಾವಿ: ಕರ್ನಾಟಕ ಸೇರಿ ಮೂರು ರಾಜ್ಯಗಳಲ್ಲಿ ಭಾರೀ ಸಂಚಲನ ಮೂಡಿಸಿರುವ 400 ಕೋಟಿ ರೂಪಾಯಿ ತುಂಬಿದ್ದ ಎರಡು ಕಂಟೇನರ್ ಕಳ್ಳತನ ನಡೆದಿದೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಅಚ್ಚರಿಯ ಬೆಳವಣಿಗೆ ನಡೆದಿವೆ.

ಈ ಕೇಸಿನ ಪ್ರಮುಖ ಆರೋಪಿ ಕಿಶೋರ್ ಸಾಳವೆ ಮೊನ್ನೆ ನಾಸಿಕ್ ತಾಲೂಕಿ ನ ಘೋಟಿ ಪೊಲೀಸ್ ಠಾಣೆ ಯಲ್ಲಿ ಶರಣಾಗಿದ್ದಾರೆ. ಈತನನ್ನು ಪೊಲೀಸರು ವಶಕ್ಕೆ ಪಡೆದು ತೀವ್ರ ವಿಚಾರಣೆಗೊಳಪಡಿಸಿದ್ದಾರೆ. ಪ್ರಕರಣದ ಒಟ್ಟಾರೆ ಬಂಧಿತರ ಸಂಖ್ಯೆ ಎಂಟಕ್ಕೆ ಏರಿಕೆ ಆಗಿದೆ. ಬೆಳಗಾವಿ ಜಿಲ್ಲೆಯ ಚೂರ್ಲಾ ಎಂಬಲ್ಲಿ ಅಂದರೆ ಕರ್ನಾಟಕ, ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳ ಗಡಿಯಲ್ಲಿ ನಡೆದಿದೆ ಎನ್ನಲಾಗಿರುವ ನೂರಾರು ಕೋಟಿ ನಗದು ಕಳ್ಳತನ ಪ್ರಕರಣದಲ್ಲಿ ಹಣದ ಮಾಲೀಕ ಎನ್ನಲಾದ ಪ್ರಮುಖ ಆರೋಪಿ ಬಿಲ್ಡರ್ ಕಿಶೋರ್ ಶರಣಾಗಿದ್ದಾನೆ. ಆತ ನನ್ನು ವಶಕ್ಕೆ ಪಡೆದಿರುವ ವಿಶೇಷ ತನಿಖಾ ತಂಡ (ಎಸ್ಐಟಿ) ಫೆ.3ರವರೆಗೆ ವಿಚಾರಣೆ ನಡೆಸಲು ಅನುಮತಿ ಪಡೆದಿದ್ದಾರೆ.

ಎಲ್ಲ ಆಯಾಮಗಳಲ್ಲಿ ತನಿಖೆ ಪ್ರಕರಣದಲ್ಲಿ ಒಟ್ಟು ಎಂಟು ಮಂದಿ ಬಂಧನವಾಗಿದೆ. ಇನ್ನೊಬ್ಬ ಕಿಂಗ್‌ಪಿನ್ ವಿರಾಟ್ ಗಾಂಧಿಯ ಎಸ್ಐಟಿ ಕಸ್ಟಡಿ ಮುಕ್ತಾಯ ಗೊಂಡಿದ್ದು, ಆತನನ್ನು ನ್ಯಾಯಾಂ ಗ ಬಂಧನಕ್ಕೆ ಒಪ್ಪಿಸ ಲಾಗಿದೆ. ಇನ್ನುಳಿದ ಆರೋಪಿಗಳ ಪೈಕಿ ಮಚ್ಛೇಂದ್ರ ಮಡವಿಯನ್ನು ಹೆಚ್ಚಿನ ವಿಚಾರಣೆಗಾಗಿ ಫೆಬ್ರವರಿ 2ರ ವರೆಗೆ ಪುನಃ ಪೊಲೀಸ್ ವಶಕ್ಕೆ ಪಡೆಯಲಾಗಿದ್ದು, ವಿಚಾರಣೆ ನಡೆಸಲಾಗುತ್ತಿದೆ.

ಪ್ರಕರಣ ಕುರಿತಂತೆ ವೈರಲ್ ಆದ ಆಡಿಯೋ ಸಂಭಾಷಣೆ ಹಾಗೂ ಇಷ್ಟೊಂದು ಹಣ ಎಲ್ಲಿಂದ ಬಂತು/ ಇಷ್ಟು ಹಣ ಸಾಗಾಣೆ ಆಗುತ್ತಿದ್ದುದು ನಿಜವಾ ಎಂಬೆಲ್ಲ ಆಯಾದಲ್ಲಿ ತನಿಖೆ ನಡೆಸುತ್ತಿದ್ದಾರೆ. ಸಂಬಂಧಿಸಿದ ಆರೋಪಿಗಳು ಹಾಗೂ ಸಾಕ್ಷ್ಯಗಳ ಮೂಲಕ ಮಾಹಿತಿ ಕೆಲ ಹಾಕುತ್ತಿದ್ದಾರೆ. ಈ ಪ್ರಕರಣ ಕಳೆದ ವರ್ಷ ಅಂದರೆ ಮೂರು ತಿಂಗಳ ಹಿಂದೆ ಯೇ ನಡೆದಿತ್ತು ಎನ್ನಲಾಗಿದೆ. ಆದರೆ ಇತ್ತೀಚೆಗೆ ಬೆಳಕಿಗೆ ಬಂದಿ ದ್ದು ಕರ್ನಾಟಕ ಹಾಗೂ ಮಹಾ ರಾಷ್ಟ್ರ ಪೊಲೀಸರು ಈ ಬಗ್ಗೆ ಹೆಚ್ಚಿನ ತಲೆ ಕೆಡಸಿಕೊಂಡಿದ್ದಾರೆ. 'ಗಡಿ ಭಾಗದ ಚೋರ್ಲಾ ಘಾಟ್ ನಲ್ಲಿ 400 ಕೋಟಿ ರೂ. ಸಾಗಿ ಸುತ್ತಿದ್ದ ಎರಡು ಕಂಟೇನರ್ ಹಣ ಕಳ್ಳತನವಾಗಿದೆ. ಅದನ್ನು ನಾನು ಮಾಡಿದ್ದೇನೆ ಎಂದು ಕಿಶೋರ್ ಸಾಳವೇ ಹಾಗೂ ಅವರ ತಂಡ ನನ್ನನ್ನು ಅಪಹರಣ ಮಾಡಿದ್ದರು ಎಂದು ಸಂದೀಪ್ ಪಾಟೀಲ್ ಕಳೆದ ಜನವರಿಯಲ್ಲಿ ದೂರು ನೀಡಿದ್ದರು. ಆಗ ಪ್ರಕರಣ ಬೆಳಕಿಗೆ ಬಂದಿತ್ತು.ಖಾಕಿ ಮೇಲೆ ದೂರು ದಾರ ಗಂಭೀರ ಆರೋಪ ಪ್ರಕರ ಣಕ್ಕೆ ಸಂಬಂಧಿಸಿದಂತೆ ತನಿಖೆ ಚುರುಕು ಗೊಂಡಿದೆ. 400 ಕೋಟಿ ಹಣಕ್ಕೆ ಬದಲಾಗಿ 35 ಕೋಟಿ ಎಂದು ತೋರಿಸಲು ಪೊಲೀಸರು ಮುಂದಾಗಿದ್ದಾರೆ. ಪ್ರಕರಣದ ತೀವ್ರತೆ ಕಡಿಮೆ ಮಾಡಲು ಪ್ಲ್ಯಾನ್ ಮಾಡಿದ್ದಾರೆ. ಈ ಮೂಲಕ ಸತ್ಯಾಂಶ ಮರೆ ಮಾಚಿ ಪ್ರಭಾವಿಗಳನ್ನು ರಕ್ಷಿಸಲು ಮುಂದಾಗಿದ್ದಾರೆ ಎಂದು ಅವರು ಗಂಭೀರವಾಗಿ ಆರೋಪಿಸಿದ್ದಾರೆ. ಈ ಸಂಬಂಧ ದೂರುದಾರ ಸಂದೀಪ ಅವರು ಫೆಸ್‌ಬುಕ್‌ನಲ್ಲಿ ಬರೆದುಕೊಂಡಿದ್ದರು.

# ಸಂವಿಧಾನವನ್ನು ರಕ್ಷಿಸಿದರೆ ಸಂವಿಧಾನವು ನಮ್ಮನ್ನು ರಕ್ಷಿಸುತ್ತದೆ ಎಂಬ ಅರಿವು ಮೂಡಿಸಬೇಕಾಗಿದೆ: ಶಾಸಕ ಎಸ್.ಟಿ.ಸೋಮಶೇಖರ್

ಯಶವಂತಪುರ : ನಾವು ಸಂವಿಧಾನವನ್ನು ರಕ್ಷಿಸಿದರೆ ಸಂವಿಧಾನವು ನಮ್ಮನ್ನು ರಕ್ಷಿಸುತ್ತದೆ ಎಂಬ ಅರಿವು ಜನರಲ್ಲಿ ಮೂಡಿಸಬೇಕಾಗಿದೆ ಎಂದು ಶಾಸಕ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಕೆಂಗೇರಿ ಉಪನಗರದ ಪುನೀತ್ ರಾಜ್ ಕುಮಾರ್ ಸರ್ಕಲ್ ಬಳಿ ಹಮ್ಮಿಕೊಂಡಿದ್ದ 77ನೇ ಗಣ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು ದೇಶದ ಸಂವಿಧಾನದ ರಕ್ಷಣೆ ಮತ್ತು ಅದರ ಪಾಲನೆ ಹಾಗೂ ಗೌರವವನ್ನು ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ಹೇಳಿದರು



.ಕಾಂಗ್ರೆಸ್ ಮುಖಂಡ ಚೇತನ್ ಗೌಡ ಮಾತನಾಡಿ ಸಾಮಾಜಿಕ, ಸಮಾನತೆಯ ಸಂವಿಧಾನವನ್ನು ಡಾ.ಬಿ.ಆರ್.ಅಂಬೇಡ್ಕರ್ ಭಾರತದ ಪ್ರಜೆಗಳಿಗೆ ನೀಡಿದ್ದಾರೆ. ಗಣ ರಾಜ್ಯೋತ್ಸವವನ್ನು ದೇಶಾದ್ಯಂತ ಅತ್ಯಂತ ಸಂಭ್ರಮ ಮತ್ತು ದೇಶಭಕ್ತಿಯಿಂದ ಆಚರಿಸಲಾಗುತ್ತಿದೆ. ಒಕ್ಕೂಟ ವ್ಯವಸ್ಥೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಧ್ಯೇಯವಾಗಬೇಕು ಎಂದು ಕರೆ ನೀಡಿದರು.

ಕೆಂಗಲ್ ಹನುಮಂತಯ್ಯ ವಾರ್ಡ್ ಅಧ್ಯಕ್ಷ ಟಿ.ಪ್ರಭಾಕರ್ , ಮುಖಂಡರಾದ ಕೆ.ವೈ.ಕೃಷ್ಣ, ಶಿವರಾಜ್, ರಾಬಿನ್ ನಾಗರಾಜ್, ಪುರುಷೋತ್ತಮ್, ಆರುಂಧತಿ ನಾಗರಾಜ್, ಆರುಂಧತಿ ರಾಜು, ಪದ್ಮಾ ಹರೀಶ್, ಪರ್ಶಿದ್,ಶಾಹಿದ್, ಸಜ್ಜದ್ ಬಾಬು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಕೆಂಚನಪುರ ಕ್ರಾಸ್ ಬಳಿ ರಸ್ತೆ ನಾಮಕರಣ ಫಲಕ ಅನಾವರಣ, ಉಲ್ಲಾಳ ಉಪ್ಕಾರ್ ಲೇಔಟ್ ಹತ್ತಿರ ಉದ್ಯಾನವನ ತಂತಿಬೇಲಿ ಅಳವಡಿಕೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಶಾಸಕರು ಚಾಲನೆ ನೀಡಿದರು.



# ಕನ್ನಡ ನಮ್ಮ ಹೆಗ್ಗುರುತು, ಅಸ್ತಿತ್ವವಷ್ಟೇ ಅಲ್ಲ, ಆತ್ಮಗೌರವವೂ ಹೌದು,

ಯಶವಂತಪುರ : ಕನ್ನಡ ನಮ್ಮ ಹೆಗ್ಗುರುತು, ಅಸ್ತಿತ್ವವಷ್ಟೇ ಅಲ್ಲ, ಆತ್ಮಗೌರವವೂ ಹೌದು, ಅನ್ಯ ಭಾಷೆಗಳ ಪ್ರಭಾವದಿಂದಾಗಿ ಇತ್ತೀಚಿನ ದಿನಗಳಲ್ಲಿ ಕನ್ನಡ ಕಡಿಮೆಯಾಗುತ್ತಿದೆ ಎಂದು ಜಯಕರ್ನಾಟಕ ಸಂಘಟನೆಯ ಮುಖ್ಯ ಸಲಹೆಗಾರ ಪ್ರಕಾಶ್‌ರೈ ಕಳವಳ ವ್ಯಕ್ತಪಡಿಸಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಕುಂಬಳಗೋಡು ಗ್ರಾಮದಲ್ಲಿ ಜಯ ಕರ್ನಾಟಕ ಕುಂಬಳಗೋಡು ಶಾಖೆಯ 16ನೇ ವರ್ಷದ ಅದ್ದೂರಿ ವಾರ್ಷಿಕೋತ್ಸವ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಕನ್ನಡವನ್ನು ಉಳಿಸುವಲ್ಲಿ ಇಂದಿನ ಯುವಕರ ಪಾತ್ರ ಅಪಾರವಾಗಿದೆ. ಹಾಗಾಗಿ ಅನ್ಯ ಭಾಷಿಕರಿಗೆ ಕನ್ನಡ ಕಲಿಸಲು ಪ್ರತಿಯೊಬ್ಬರು ಶ್ರಮವಹಿಸಬೇಕು ಎಂದು ಕರೆ ನೀಡಿದರು. ಕುಂಬಳಗೋಡು ಶಾಖೆಯ ಅಧ್ಯಕ್ಷ ಕೆ.ಎನ್.ಶ್ರೀನಿವಾಸ್ ಮಾತನಾಡಿ ಕರ್ನಾಟಕ ತನ್ನದೇ ಆದ ಶ್ರೀಮಂತ ಪರಂಪರೆ, ಸಂಸ್ಕೃತಿ, ಇತಿಹಾಸ ಹೊಂದಿರುವ ಪಾವನ ಭೂಮಿ. ಕಲೆ, ಸಾಹಿತ್ಯಕ್ಕೆ ತವರೂರಿದು. ಕನ್ನಡ ಬರೀ ಭಾಷೆಯಲ್ಲ, ಅದು ನಮ್ಮ ಉಸಿರು. ಕನ್ನಡ ಭಾಷೆ ಬೆಳವಣಿಗೆಗೆ ಎಲ್ಲರೂ ಶ್ರಮಿಸಬೇಕು. ಕನ್ನಡ ನಾಡು ನುಡಿಗಾಗಿ ದುಡಿದ ಮಹನೀಯರನ್ನು ಸದಾ ಸ್ಮರಿಸಿಕೊಳ್ಳಬೇಕೆಂದು ಹೇಳಿದರು.

ಜಯ ಕರ್ನಾಟಕ ಜಿಲ್ಲಾಧ್ಯಕ್ಷ ಬಿ.ಎಸ್.ಯೋಗಾನಂದ, ಕಾರ್ಯಾಧ್ಯಕ್ಷ ಕೆ.ಶ್ರೀನಿವಾಸ್, ಕೆ.ನಂಜೇ



ಗೌಡ, ವೆಂಕಟೇಶ್ ಯಾದವ್, ಪದಾಧಿಕಾರಿಗ ಳಾದ ನರೇಶ್ ಯಾದವ್, ರಾಕೇಶ್, ಶರತ್, ಮತ್ತಿತರರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸರ್ಕಾರಿ ಶಾಲಾ ಮಕ್ಕಳಿಗೆ ಸ್ಕೂಲ್ ಬ್ಯಾಗ್ ಹಾಗೂ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಧನಸಹಾಯದ ಚೆಕ್ ವಿತರಿಸಲಾಯಿತು.

# ಧೈರ್ಯವಿದ್ದವನು ಒಬ್ಬನೇ ಬಹುಮತ ಸಾಧಿಸಬಲ್ಲ: ಡಿಸಿಎಂ ಡಿ.ಕೆ. ಶಿವಕುಮಾರ್

ಬೆಂಗಳೂರು : ರಾಜಕೀಯದಲ್ಲಿ ಎಲ್ಲವೂ ಸಾಧ್ಯ. ರಾಜಕೀಯ ಎಂಬುದು ಸಾಧ್ಯತೆಗಳ ಕಲೆ. ಇಲ್ಲಿ ಎಲ್ಲವೂ ಸಾಧ್ಯ. One man with Courage



makes a majority ಎಂಬುದನ್ನು ನಾನು ನಂಬಿದ್ದೇನೆ. ದೃಢವಾದ ನಿಲುವು, ಸಂಕಲ್ಪ ಹೊಂದಿದ್ದರೆ, ಒಬ್ಬನೇ ಸಾಕು. ಆತನ ಜೊತೆ 140 ಜನರೂ ಇರುತ್ತಾರೆ, ಇನ್ನೂ ಜಾಸ್ತಿನೂ ಆಗುತ್ತಾರೆ. ನೋಡೋಣ 2028ರಲ್ಲಿ ಏನಾಗುತ್ತದೆ" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಮುಖ್ಯಮಂತ್ರಿಗಳು ಉತ್ತರ ನೀಡುವಾಗ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಅಧಿಕಾರ ಹಂಚಿಕೆ ವಿಚಾರ ಪ್ರಸ್ತಾಪಿಸಿದಾಗ ಡಿಸಿಎಂ ಅವರು ಮಾರುತ್ತರ ನೀಡಿದರು.

'ಕಳೆದ ಒಂದು ತಿಂಗಳಿಂದ ಡಿ.ಕೆ. ಶಿವಕುಮಾರ್ ಅವರ ಮಾತು, ಟ್ವೀಟ್ ಗಳು ನೂರು ಅರ್ಥ ಬರುವಂತಿದ್ದು, ಎಲ್ಲರೂ ಗೊಂದಲಕ್ಕೆ ಒಳಗಾಗಿದ್ದಾರೆ' ಎಂದು ಅಶೋಕ್ ಹೇಳಿದರು. ಆಗ ಶಿವಕುಮಾರ್ ಅವರು ಸ್ಪಷ್ಟನೆ ಕೊಟ್ಟರು.

"ಅಶೋಕ್ ಅವರೇ, ನೀವು ಹಿರಿಯ ರಾಜಕಾರಣಿ. ಯಾರು ಏನಾದರೂ ಮಾತನಾಡಲಿ, ನಾನು ತಲೆಕೆಡಿಸಿಕೊಳ್ಳುವುದಿಲ್ಲ. ನಾನು ವಿದ್ಯಾರ್ಥಿ ನಾಯಕನಿಂದ ಬೆಳೆದು ಬಂದವನು. ನನ್ನದೇ ಆದ ಮೌಲ್ಯಗಳನ್ನು ಪಾಲಿಸಿಕೊಂಡು, ಉಳಿಸಿಕೊಂಡು ಬಂದಿದ್ದೇನೆ. ಪಕ್ಷ ನನಗೆ ಚಿಕ್ಕ ವಯಸ್ಸಿಗೆ ಟಿಕೆಟ್ ಕೊಟ್ಟಿದ್ದು, ಇಲ್ಲಿಯವರೆಗೂ ಬೆಳೆದಿದ್ದೇನೆ. ರಾಜಕೀಯದಲ್ಲಿ ಏಳು ಬೀಳು ಸಹಜ. ನಾನು ಎಂತೆಂಥಹವರ ಏಳು ಬೀಳು ನೋಡಿದ್ದೇನೆ. ನಾನು ಬಿದ್ದಿದ್ದೇನೆ, ಎದ್ದಿದ್ದೇನೆ, ಜೈಲುವಾಸ ಎಲ್ಲವನ್ನೂ ಅನುಭವಿಸಿದ್ದೇನೆ. ಇನ್ನು ಒಂದು ತಿಂಗಳು ಕಳೆದರೆ ನಾನು ಪಕ್ಷದ ಅಧ್ಯಕ್ಷನಾಗಿ ಆರು ವರ್ಷ ಪೂರ್ಣಗೊಳ್ಳುತ್ತದೆ" ಎಂದರು. "ಸಿಎಂ ಸಿದ್ದರಾಮಯ್ಯ ಅವರು ಸೇರಿದಂತೆ 139 ಶಾಸಕರೂ ನನ್ನ ಬಲ. ಸಿದ್ದರಾಮಯ್ಯ ಅವರು 100 % ನನ್ನ ಜತೆಗಿದ್ದಾರೆ. ಇದರಲ್ಲಿ ಬೇರೆ ಪ್ರಶ್ನೆಯೇ ಇಲ್ಲ. ನಾವಿಬ್ಬರೂ ಪರಸ್ಪರ ಕೈಜೋಡಿಸಿ, ಜತೆಯಾಗಿ ಕೆಲಸ ಮಾಡಿಕೊಂಡು ಹೋಗುತ್ತಿದ್ದೇವೆ, ಮುಂದೆಯೂ ಕೆಲಸ ಮಾಡುತ್ತೇವೆ. ನಾವು ಜನಕ್ಕೆ ಮಾತು ಕೊಟ್ಟಿದ್ದು, ಆ ಮಾತನ್ನು ಉಳಿಸಿಕೊಳ್ಳಲು ಕೆಲಸ ಮಾಡುತ್ತೇವೆ. ನಾವು ನುಡಿದಂತೆ ನಡೆಯುತ್ತಿದ್ದೇವೆ, ಮುಂದೆಯೂ ನಡೆಯುತ್ತೇವೆ. ಇದರಲ್ಲಿ ಯಾವುದೇ ಗೊಂದಲ ಬೇಡ. ಅವರ ಕಷ್ಟಕಾಲದಲ್ಲಿ ನಾನು ನಿಂತಿದ್ದೇನೆ, ಮುಂದೆಯೂ ನಿಲ್ಲುತ್ತೇನೆ. ಅವರು ಕೂಡ ಕಷ್ಟ ಕಾಲದಲ್ಲಿ ನನ್ನ ಜತೆ ನಿಲ್ಲಲಿದ್ದಾರೆ" ಎಂದು ಹೇಳಿದರು.

ನಿಮ್ಮ ಟ್ವೀಟ್ ಅರ್ಥವೇನು ಎಂದು ಅಶೋಕ್ ಅವರು ಮತ್ತೆ ಕೇಳಿದಾಗ, "ನೀವು ಟ್ವೀಟ್ ಅನ್ನು ಯಾವ ರೀತಿ ಅರ್ಥ ಮಾಡಿಕೊಳ್ಳುತ್ತೀರಿ ಎಂಬುದು ನಿಮಗೆ ಬಿಟ್ಟ ವಿಚಾರ" ಎಂದು ಹೇಳಿದರು.

ನೀವು ಯಾವ ವಿಚಾರಕ್ಕೆ ತಾಳ್ಮೆ ಬಗ್ಗೆ ಮಾತನಾಡಿದ್ದೀರಿ ಎಂದಾಗ, "ಯಾರ್ಯಾರೋ ಮಾತನಾಡುವುದಕ್ಕೆ ನಾನು ಉತ್ತರ ನೀಡಲು ಆಗುವುದಿಲ್ಲ. ನಮ್ಮ ಪಕ್ಷದಲ್ಲಿ ಹಾಗೂ ನಿಮ್ಮ (ಬಿಜೆಪಿ) ಪಕ್ಷದಲ್ಲಿ ಸಂಖ್ಯಾಬಲಕ್ಕಿಂತ ಪಕ್ಷವೇ ತೀರ್ಮಾನ ಮಾಡುತ್ತದೆ. ನಿಮ್ಮ ಸರ್ಕಾರದಲ್ಲಿ ಎಷ್ಟೋ ಸಿಎಂ ಬದಲಾದರು, ಸಚಿವ ಸಂಪುಟಗಳೇ ಬದಲಾದವು. ಹೀಗಾಗಿ ನಿಮ್ಮ ಮಾತಿಗೆ ನಾನು ಜಗ್ಗುವುದಿಲ್ಲ, ನೀವು ಸುಮ್ಮನೇ ತಲೆಕೆಡಿಸಿಕೊಳ್ಳಬೇಡಿ" ಎಂದು ತಿಳಿಸಿದರು.

# ಹಿಂದೂ ಧರ್ಮ ಉಳಿಯಲು ಸಂಕಲ್ಪ ಮಾಡಿ, ಜನಸಂಖ್ಯೆ ನಿಯಂತ್ರಣಕ್ಕೆ ಪ್ರಧಾನಿಗೆ ಶ್ರೀ ಪೂರ್ಣನಂದಪುರಿ ಸ್ವಾಮೀಜಿ ಮನವಿ



**ಬೆಂಗಳೂರು:** ಬಸವೇಶ್ವರನಗರ ಹಿಂದೂ ಸಮಾಜೋತ್ಸವ ಆಯೋಜನಾ ಸಮಿತಿ ವತಿಯಿಂದ ರಾಜಾಜಿನಗರದ, ಮಂಜುನಾಥನಗರದಲ್ಲಿ ಬೃಹತ್ ಹಿಂದೂ ಸಮಾವೇಶ ಆಯೋಜಿಸಲಾಗಿತ್ತು. ಶ್ರೀ ಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ಪೂರ್ಣನಂದಪುರಿ ಸ್ವಾಮೀಜಿರವರು, ಶಾಸಕರಾದ ಎಸ್.ಸುರೇಶ್ ಕುಮಾರ್ ರವರು, ವಿಜ್ಞಾನಿ ರಘೋತ್ತಮರಾವ್, ಸಂಘದ ಪ್ರಮುಖರಾದ ರಾಜ್ ಗೋಪಾಲ್ ರವರು, ಮಾಜಿ ಬಿಬಿಎಂಪಿ ಸದಸ್ಯರಾದ ಹೆಚ್.ಆರ್.ಕೃಷ್ಣಪ್ಪರವರು ದೀಪ ಬೆಳಗಿಸಿ, ಭಾರತಾ ಮಾತೆ ಬಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಸಮಾವೇಶಕ್ಕೆ ಚಾಲನೆ ನೀಡಿದರು. ಮಾಜಿ ಪಾಲಿಕೆ ಸದಸ್ಯರುಗಳಾದ ರಾಜಣ್ಣ, ವಿಜಯಕುಮಾರ್, ದೀಪಾ ನಾಗೇಶ್ ರವರು ಉಪಸ್ಥಿತರಿದ್ದರು. ಶ್ರೀ ಶ್ರೀ ಶ್ರೀ ಪೂರ್ಣನಂದಪುರಿ ಸ್ವಾಮೀಜಿರವರು ಮಾತನಾಡಿ ರಾಜಕೀಯ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು . ದೇವರ ಜೊತೆಯಲ್ಲಿ ಇರಬೇಕು ಎಂಬ ಹಂಬಲದಿಂದ ಯೋಜನಾ ಅಯೋಗದ ಅಧಿಕಾರ ಬಿಟ್ಟು ಲೋಕಕಲ್ಯಾಣಕ್ಕಾಗಿ ನಾನು ದೀಕ್ಷೆ ಪಡೆದು ಸನ್ಯಾಸಿಯಾದೆ.

ಸಮಾಜವೇ ನನ್ನ ಬಂಧುಗಳು, ಅವರ ಕಲ್ಯಾಣಕ್ಕಾಗಿ ನಾನು ಶ್ರಮಿಸುವೆ. ಹಿಂದೂ ಸಮಾಜೋತ್ಸವದಲ್ಲಿ ಭಾಗವಹಿಸಿರುವುದು ಸಂತೋಷದಾಯಕ ವಿಷಯವಾಗಿದೆ.

ಹಿಂದೂ ಧರ್ಮ ಉಳಿಯಬೇಕಾದರೆ ಎಲ್ಲರು ಸಂಕಲ್ಪ ಮಾಡಬೇಕು. ಸ್ವಾತಂತ್ರ್ಯ ನಂತರ ಹಿಂದೂಗಳ ಸಂಖ್ಯೆ ಶೇಕಡ 10ರಷ್ಟು ಆಗಿದೆ. 7ಪರ್ಸೆಂಟ್ ಇದ್ದವರು ಈಗ 17ಪರ್ಸೆಂಟ್ ಆಗಿದ್ದಾರೆ ಎಂದರೆ ಯೋಚನೆ ಮಾಡಬೇಕಾದ ವಿಷಯವಾಗಿದೆ.ಬುದ್ಧಿ ಜೀವಿಗಳು ಅಂತ ಹೇಳಿಕೊಳ್ಳುವ ಕೆಲವರು ಹಿಂದೂ ಧರ್ಮದ ಕುರಿತು ಅವಹೇಳನ ಮಾಡುತ್ತಾರೆ. ಬೇರೆ ಧರ್ಮದವರಲ್ಲಿ ಅಪಸ್ವರ ಮಾತನಾಡಿದರೆ ಅವರಿಗೆ ಉಳಿಗಾಲವಿಲ್ಲ. ನಮ್ಮಲ್ಲಿ ಜಾತಿ, ದೇವರುಗಳು ಹೆಚ್ಚು ವಿವಿಧತೆ ಇರುವುದರಿಂದ ನಮ್ಮಲ್ಲಿ ಸಂಘಟನೆ ಇಲ್ಲ. ಏಕತೆ ಮೂಡಬೇಕು ಹಿಂದೂಗಳಲ್ಲಿ.ಮಗ, ತಂದೆ ಕೊಲೆ ಮಾಡುವ ಸಂಗತಿ ನೋಡುತ್ತಿದ್ದೇವೆ, ಚಿಕ್ಕ ವಯಸ್ಸಿನಲ್ಲಿ ಮಕ್ಕಳಿಗೆ ಸಂಸ್ಕೃತಿ, ಸಂಪ್ರದಾಯ ಕಲಿಸಬೇಕು. ರಾಜ್ಯದ ಮುಖ್ಯಸ್ಥರು ಒಂದು ವರ್ಗದವರಿಗೆ ಬೆಂಬಲಿಸುವುದು ತಪ್ಪು. ಹಿಂದೂ ಧರ್ಮ ಇಬ್ಭಾಗ ಮಾಡುವಲ್ಲಿ ಸರ್ಕಾರ ಪ್ರಯತ್ನ ಮಾಡುತ್ತಿದೆ. ಹಿಂದೂಗಳಿಗೆ ತೊಂದರೆಯಾದರೆ ಯಾರು ನಮ್ಮನ್ನು ಕಾಪಾಡುವುದಿಲ್ಲ, ಯಾವ ರಾಷ್ಟ್ರವು ಮುಂದೆ ಬರುವುದಿಲ್ಲ.

ಸರ್ಕಾರದ ಯೋಜನೆಗಳು ಒಂದು ವರ್ಗಕ್ಕೆ ಮೀಸಲು ಇಡಬಾರದು ಜನಸಂಖ್ಯೆ ನಿಯಂತ್ರಣ ಮೇಲೆ ಕಾಯಿದೆ ತರಬೇಕು ಎಂದು ಪ್ರಧಾನಿ ನರೇಂದ್ರಮೋದಿರವರಿಗೆ ಮನವಿ ಮಾಡುತ್ತೇನೆ. ದೇಶ ಉಳಿಯಬೇಕಾದರೆ ಜನಸಂಖ್ಯೆ ನಿಯಂತ್ರಣ ಮುಖ್ಯ ಎಂದು ಹೇಳಿದರು. ವಿಜ್ಞಾನಿ ರಘೋತ್ತಮ್ ರಾವ್ ರವರು ಮಾತನಾಡಿ ಹಿಂದೂ ಧರ್ಮ ಅದಿ ಮತ್ತು ಅಂತ್ಯವಿಲ್ಲ. ಭೂಮಿ ತಾಯಿಯನ್ನು ನಾವು ಹಾಳು ಮಾಡುತ್ತಿದ್ದೇವೆ ಭೂಮಿ, ಪರಿಸರ ಉಳಿಸಿ, ಬೆಳಸಲು ಮಕ್ಕಳಿಗೆ ಅರಿವು ಮೂಡಿಸಬೇಕು. ಮಂಡಲ ಅಧ್ಯಕ್ಷರಾದ ಸುದರ್ಶನ್, ನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಘವೇಂದ್ರರಾವ್, ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಗಿರೀಶ್ ಗೌಡ, ವಾರ್ಡ್ ಅಧ್ಯಕ್ಷರಾದ ಉಮೇಶ್ ರವರು ಭಾಗವಹಿಸಿದ್ದರು.

ಭಜನೆ , ದೇವರನಾಮ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಯಶವಂತಪುರ : ಮುಂಬರುವ ಜಿಬಿಎ ಚುನಾವಣೆಯಲ್ಲಿ ಜವಾಬ್ದಾರಿಯುತ ನಾಗರೀಕರಾಗಿ ಒಳ್ಳೆಯ ಅಭ್ಯರ್ಥಿಗೆ ಮತ ಚಲಾಯಿಸಬೇಕೆಂದು ಶಾಸಕ ಎಸ್.ಟಿ.ಸೋಮಶೇಖರ್ ಮನವಿ ಮಾಡಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೆಂಗೇರಿ ಹಾಗೂ ಕೆಂಗೇರಿ ಕೋಟೆ ವಾರ್ಡ್ ಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸದ, ಜನಸಾಮಾನ್ಯರ ಬಳಿ ಸುಲಿಗೆ ಮಾಡುವ, ಪ್ರಜಾಪ್ರಭುತ್ವದ ತತ್ವಗಳಿಗೆ ವಿರುದ್ಧವಾಗಿ ಕಾರ್ಯ ನಿರ್ವಹಿಸುವ ಸದಸ್ಯರಿಗೆ ಮತ ಚಲಾಯಿಸದಂತೆ ತಾಕೀತು ಮಾಡಿದರು.

ಅಭ್ಯರ್ಥಿಗಳು ದಿನದಲ್ಲಿ ಕೇವಲ 2 ಗಂಟೆ ಅಧಿಕಾರಿಗಳ ಜೊತೆಗೆ ವಾರ್ಡ್ ಸುತ್ತಿದರೆ ಸಾಕು ಜನರು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು. ಜನರು ಜೊತೆ ನಿಕಟ ಸಂಪರ್ಕ ಹೊಂದಿರುವ, ಸಮಸ್ಯೆಗಳಿಗೆ ಸ್ಪಂದಿಸುವ ಉತ್ತಮ ಅಭ್ಯರ್ಥಿಗಳಿಗೆ ವಾರ್ಡ್ ವಾರು ಟಿಕೆಟ್ ಹಂಚಿಕೆ ಮಾಡಲಾಗುವುದು ಎಂದು ತಿಳಿಸಿದರು.

ಕೆಂಗೇರಿ ಬ್ಲಾಕ್ ಅಧ್ಯಕ್ಷ ಮೈಲಸಂದ್ರ ನಾಗರಾಜ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಶಿವಮಾದಯ್ಯ, ವಾರ್ಡ್ ಅಧ್ಯಕ್ಷ ಅರುಣ್ ಕುಮಾರ್, ಅಮೃತ್ ಗೌಡ, ಶ್ರೀನಾಥ್, ಅಜಯ್,



ಮಂಜುನಾಥ್, ಅರುಣ್ ಕುಮಾರ್, ಕೋಡಿ ಪಾಳ್ಯ ಮಹೇಶ್, ಬಿಬಿಎಂಪಿ, ಬೆಸ್ಕಾಂ, ಜಲಮಂಡಳಿ ಅಧಿಕಾರಿಗಳು ಉಪಸ್ಥಿತರಿದ್ದರು.

# ಬೆಂಗಳೂರು 4 ಹೆಬ್ಬಾಗಿಲಿನಲ್ಲಿ ನಾಡಪ್ರಭು ಕೆಂಪೇಗೌಡರ ಬೃಹತ್ ಪ್ರತಿಮೆ ನಿರ್ಮಾಣ ಮಾಡಬೇಕಾಗಿದೆ

ಯಶವಂತಪುರ : ಬೆಂಗಳೂರು ಪ್ರವೇಶಿಸುವ ನಾಲ್ಕು ದಿಕ್ಕುಗಳ ಹೆಬ್ಬಾಗಿಲಿನಲ್ಲಿ ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಬೃಹತ್ ಪ್ರತಿಮೆ ನಿರ್ಮಾಣ ಮಾಡಬೇಕಾಗಿದೆ ಎಂದು ಸ್ಪಟಿಕಪುರಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಂಜಾವಧೂತ ಮಹಾ ಸ್ವಾಮೀಜಿ ಕರೆ ನೀಡಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಉಲ್ಲಾಳುವಿನ ಸ್ಪಟಿಕಪುರಿ ಮಹಾ ಸಂಸ್ಥಾನ ಮಠದ ಆವರಣದಲ್ಲಿ ಯಶವಂತಪುರ ಕ್ಷೇತ್ರ ಒಕ್ಕಲಿಗರ ವೇದಿಕೆಯ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಸಮೀಪ ಅಷ್ಟಪಥದ ಬಳಿ ಬೃಹತ್ ನಾಡಪ್ರಭು ಕೆಂಪೇಗೌಡರ ಪ್ರತಿಮೆ ನಿರ್ಮಾಣಕ್ಕೆ ಮುಂದಾಗಿ ಎಂದು ವೇದಿಕೆಯ ಸದಸ್ಯರಿಗೆ ಮಾರ್ಗದರ್ಶನ ನೀಡಿದರು.

ಇಂದು ಬೆಂಗಳೂರಿನಲ್ಲಿ ವಿವಿಧ ದೇಶಗಳ, ರಾಜ್ಯಗಳ ಜನರು ಬಂದು ನೆಲೆಸಿದ್ದಾರೆ. ದೊಡ್ಡ ದೊಡ್ಡ ಐಟಿ ಬಿಟಿ ಕಂಪನಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಂತಹವರಿಗೆ ನಾಡಪ್ರಭು ಕೆಂಪೇಗೌಡರ ಕುರಿತು ತಿಳಿಸುವ ಅಗತ್ಯತೆ ಇದೆ. ಸಮಾಜದ ಬಾಂಧವರು ಪ್ರತಿಮೆ ನಿರ್ಮಾಣ ಕಾರ್ಯದಲ್ಲಿ ಒಗ್ಗಟ್ಟು ಪ್ರದರ್ಶನ ನೀಡಬೇಕಾಗಿದೆ ಎಂದರು.

ಯಶವಂತಪುರ ಕ್ಷೇತ್ರ ಒಕ್ಕಲಿಗರ ವೇದಿಕೆಯ ಅಧ್ಯಕ್ಷ ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿ ಯೋಗಾನಂದ, ಕಾರ್ಯಾಧ್ಯಕ್ಷ ಆರ್.ಮುನಿರಾಜು, ಸಂಘಟನಾ ಕಾರ್ಯದರ್ಶಿಗಳಾದ ಲತಾ, ಸಾವಿತ್ರಿ, ಶಾಂತ, ತಾರಾ, ಪದ್ಮಾ ಹರೀಶ್, ನಿರ್ದೇಶಕ ನರಸಿಂಹಮೂರ್ತಿ ಸೇರಿದಂತೆ ವೇದಿಕೆಯ ಮತ್ತಿತರರು ಉಪಸ್ಥಿತರಿದ್ದರು. ಯಶವಂತಪುರ ಕ್ಷೇತ್ರ ಒಕ್ಕಲಿಗರ ವೇದಿಕೆಯ ನೂತನ ವರ್ಷದ ಕ್ಯಾಲೆಂಡರ್ ಅನ್ನು ಸ್ಪಟಿಕಪುರಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಂಜಾವಧೂತ ಮಹಾ ಸ್ವಾಮೀಜಿ ಬಿಡುಗಡೆಗೊಳಿಸಿದರು.ಯಶವಂತಪುರ ಕ್ಷೇತ್ರ ಒಕ್ಕಲಿಗರ ವೇದಿಕೆಯ ಅಧ್ಯಕ್ಷ ರಾಮಕೃಷ್ಣ, ಉಪಾಧ್ಯಕ್ಷೆ ತಾರಾ, ಪ್ರಧಾನ ಕಾರ್ಯದರ್ಶಿ ಯೋಗಾನಂದ, ಕಾರ್ಯಾಧ್ಯಕ್ಷ ಆರ್.ಮುನಿರಾಜು, ಸಂಘಟನಾ ಕಾರ್ಯದರ್ಶಿಗಳಾದ ಲತಾ, ಸಾವಿತ್ರಿ, ಶಾಂತ, ಪದ್ಮಾ ಹರೀಶ್, ನಿರ್ದೇಶಕರಾದ ಪ್ರಮೀಳಾ ರಾಜಣ್ಣ, ನರಸಿಂಹಮೂರ್ತಿ ಸೇರಿದಂತೆ ವೇದಿಕೆಯ ಮತ್ತಿತರರು ಉಪಸ್ಥಿತರಿದ್ದರು.



# ವೈದ್ಯಕೀಯ ಸಿಬ್ಬಂದಿ ಆರೋಗ್ಯ ವಿಜ್ಞಾನದ ಬಗ್ಗೆ ಅಪಾರ ಮಾಹಿತಿ ಹಾಗೂ ಹೊಂದಿರಬೇಕು : ಶಾಸಕ ಡಾ. ರಂಗನಾಥ್

ಕೆಂಗೇರಿ : ಇಂದಿನ ಮಾಹಿತಿ ಯುಗದಲ್ಲಿ ರೋಗಿಗಳಿಗೂ ತಮ್ಮ ಆರೋಗ್ಯ ಸಮಸ್ಯೆಗಳ ಬಗ್ಗೆ ತಕ್ಕ ಮಟ್ಟಿನ ಅರಿವು ಇರುತ್ತದೆ. ಹೀಗಾಗಿ ವೈದ್ಯಕೀಯ ಸೇವೆಯಲ್ಲಿ ತೊಡಗಿದವರು ವೈದ್ಯಕೀಯ ಸಿಬ್ಬಂದಿ ಆರೋಗ್ಯ ವಿಜ್ಞಾನದ ಬಗ್ಗೆ ಅಪಾರ ಮಾಹಿತಿ ಹಾಗೂ ಹೊಂದಿರಬೇಕು ಎಂದು ಶಾಸಕ ಡಾ. ರಂಗನಾಥ್ ಹೇಳಿದರು.

ಎಸ್ ಜೆ ಬಿ ಐ ಟಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಬಿಜಿಎಸ್ ಗ್ಲೋಬಲ್ ಇನ್ಸ್ಟಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸ್ ಕಾಲೇಜಿನ 3ನೇ ವರ್ಷದ ಘಟಿಕೋತ್ಸವ ಹಾಗೂ ಬಿಜಿಎಸ್ ಫಿಸಿಯೋ ತೆರಪಿ ಕಾಲೇಜಿನ ನೂತನ ತರಗತಿಗಳ ಆರಂಭೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು

ಶುಶ್ರೂಕರು, ಶಸ್ತ್ರ ಚಿಕಿತ್ಸಾ ಸಿಬ್ಬಂದಿ, ಫಿಸಿಯೋತೆರಪಿದಾರರು ವೈದ್ಯಕೀಯ ಸೇವೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಾರೆ. ಸಹಾಯಕರ ಸಹಾಯವಿಲ್ಲದೆ ಯಾವುದೇ ಶಸ್ತ್ರ ಚಿಕಿತ್ಸೆ ಯಶಸ್ವಿಯಾಗಿ ಮಾಡಲು ಸಾಧ್ಯವಿಲ್ಲ. ಹೀಗಾಗಿ ವೈದ್ಯ ಶಾಸ್ತ್ರ ಪೂರಕ ವಿಜ್ಞಾನ ವಿದ್ಯಾರ್ಥಿಗಳಿಗೆ ವಿಶ್ವ ದಲ್ಲೆಡೆ ಅತೀವ ಬೇಡಿಕೆ ಇದೆ ಎಂದು ತಿಳಿಸಿದರು. ಬಿಜಿ ಎಸ್ ಮತ್ತು ಎಸ್ ಜೆ ಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ. ಪ್ರಕಾಶ ನಾಥ ಸ್ವಾಮೀಜಿ ಮಾತನಾಡಿ, ಮಾತುಗಳು ಮಿತ ವಾಗಿರಬೇಕು. ಇತರರ ಭಾವನೆಗಳಿಗೆ ಧಕ್ಕೆ ತರಬಾರದ ರೀತಿಯಲ್ಲಿ ನಮ್ಮ ನಡವಳಿಕೆ ಇರಬೇಕು. ನಾಲಿಗೆ ಮತ್ತು ಮನಸ್ಸು ಎಂದಿಗೂ ಪರಿಶುದ್ಧ ವಾಗಿರಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು. ಮಕ್ಕಳ ಏಳ್ಗೆಯಲ್ಲಿ ಪೋಷಕರ ಅವಿರತ ಶ್ರಮ ಅಡಗಿದೆ.







ಅವರನ್ನು ಪ್ರೀತಿಸುವ, ಆದರಿಸುವ ಜವಾಬ್ದಾರಿಯನ್ನು ಎಲ್ಲಾ ಮಕ್ಕಳು ನಿರ್ವಹಿಸಬೇಕು ಎಂದು ಹೇಳಿದರು. ಪದ್ಮಶ್ರೀ ಸಮೂಹ ಸಂಸ್ಥೆಯ ನಿರ್ದೇಶಕ ಪ್ರೊ. ರಾಜೇಶ್ ಶೆಣೈ ಮಾತನಾಡಿ, ಯಾವುದೇಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ನಿರ್ದಿಷ್ಟ ಪದವಿ ಮೂಲ ಭೂತ ಅಗತ್ಯತೆಯಾಗಿರುತ್ತದೆ. ಆದರೆ ಈ ಪದವಿಯಿಂದ ಯಶಸ್ಸು ದಕ್ಕುವುದಿಲ್ಲ. ಕೌಶಲ್ಯ ಹಾಗೂ ಮಾನವೀಯತೆಯಿಂದ ಕೂಡಿದ ವೃತ್ತಿ ಧರ್ಮ ನಮ್ಮದಾದಾಗ ಮಾತ್ರ ಯಶಸ್ವಿಯಾಗಬಹುದು ಎಂದು ತಿಳಿಸಿದರು.

ಪದ್ಮಶ್ರೀ ಸಮೂಹ ಸಂಸ್ಥೆಯ ನಿರ್ದೇಶಕ ಪ್ರೊ. ರಾಜೇಶ್ ಶೆಣೈ, ಇಂಡಿಯನ್ ಅಸೋಸಿಯೇಷನ್ ಆಫ್ ಫಿಸಿಯೋ ತೆರೇಪಿಸ್ಟ್ ಉಪಾಧ್ಯಕ್ಷ ಡಾ. ಸುರೇಶ್ ಬಾಬು ರೆಡ್ಡಿ, ಕೆ. ಎಂ. ಸಿ ಸದಸ್ಯ ಡಾ. ರವೀಂದ್ರ. ಎಚ್. ಎನ್, ಬಿಜಿಎಸ್ ಜಿಮ್ಸ್ ಕಾಲೇಜಿನ ಪ್ರಿನ್ಸಿಪಾಲ್ ಡಾ. ಮೋಹನ್ ಮತ್ತಿತರರು ಉಪಸ್ಥಿತರಿದ್ದರು





# ಸಮಾಜಕ್ಕೆ ಉತ್ತಮ ಸಂದೇಶ ಬಿಟ್ಟು ಹೋಗಬೇಕು : ಡಾ.ಪ್ರಕಾಶನಾಥ ಸ್ವಾಮೀಜಿ










ಕೆಂಗೇರಿ: ನಮ್ಮ ಇರುವಿಕೆಯನ್ನು ಸಾಕ್ಷೀಕರಿಸುವಂತ ಸಾಧನೆ ಮಾಡಿ, ಸಮಾಜಕ್ಕೆ ಉತ್ತಮ ಸಂದೇಶ ಬಿಟ್ಟು ಹೋಗಬೇಕು ಎಂದು ಬಿಜಿಎಸ್ ಮತ್ತು ಎಸ್ ಜೆ ಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ.ಪ್ರಕಾಶನಾಥ ಸ್ವಾಮೀಜಿ ಹೇಳಿದರು.

ಬಿಜಿಎಸ್ ಪಬ್ಲಿಕ್ ಶಾಲೆಯಲ್ಲಿ ನಡೆದ ಬೀಳ್ಕೊಡುಗೆ ಕಾರ್ಯಕ್ರಮ ?ಅನುಬಂಧ 2ಕೆ26? ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ನಾಡಿನ ಹಲವು ಮಠಗಳು ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದೆ. ಬಿಜಿಎಸ್ ಸಂಸ್ಥಾನ ಬೆಂಗಳೂರು ವ್ಯಾಪ್ತಿಯಲ್ಲೇ 40 ಸಾವಿರ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದೆ. 1 ಲಕ್ಷ ಮಂದಿ ವಿದ್ಯಾರ್ಥಿಗಳು ಉದ್ಯೋಗ ಪಡೆದುಕೊಂಡಿದ್ದಾರೆ ಎಂದು ಹೇಳಿದರು.

ಇಸ್ರೋ ವಿಜ್ಞಾನಿ ಡಾ. ಜಿ.ದಿವಾಕರ್ ಮಾತನಾಡಿ, ಭಾರತೀಯ ಬಾಹ್ಯಾಕಾಶ ಕ್ಷೇತ್ರವು ಇಸ್ರೋ ನೇತೃತ್ವದಲ್ಲಿ ಮಾನವ ಸಹಿತ ಗಗನ ಯಾತ್ರೆಗೆ ಸಿದ್ಧತೆ ನಡೆಸುತ್ತಿದೆ. ಚಂದ್ರನ ಮೇಲೆ ಬಾಹ್ಯಾಕಾಶ ನಿಲ್ದಾಣ ನಿರ್ಮಾಣದ ಗುರಿ ಹೊಂದಲಾಗಿದೆ. ಮುಂಬರುವ ದಿನಗಳಲ್ಲಿ ಭಾರತೀಯ ಬಾಹ್ಯಾಕಾಶ ಕ್ಷೇತ್ರ ಮತ್ತಷ್ಟು ಸಾಧನೆಗಳನ್ನು ಮಾಡಲು ಅಣಿಯಾಗುತ್ತಿದೆ ಎಂದು ದೃಢ ನಿರ್ಧಾರ ಹಾಗೂ ಆತ್ಮ ವಿಶ್ವಾಸ ನಮ್ಮ ಕನಸುಗಳನ್ನು ಸಾಕಾರಗೊಳಿಸುವ ದಿವ್ಯ ಸಾಧನಗಳು ಎಂದು ಹೇಳಿದರು.

ಕಾರ್ಪೊರೇಟ್ ಡಿವಿಷನ್ ಸಂಸ್ಥೆಯ ಜೆನರಲ್ ಮ್ಯಾನೇಜರ್ ಲತಾ ಕೃಪಾ ಶಂಕರ್ ಮಾತನಾಡಿ, ನಾವು ಗಳಿಸುವ ಪದವಿಯೊಂದಿಗೆ ಮಾರುಕಟ್ಟೆ ಆಧಾರಿತ ಕೌಶಲ್ಯ ರೂಡಿಸಿಕೊಳ್ಳಬೇಕು. ಅಗ ಮಾತ್ರ ಔದ್ಯೋಗಿಕ ರಂಗದಲ್ಲಿ ಯಶಸ್ಸು ಕಾಣಲು ಸಾಧ್ಯ ಎಂದರು. ಬಿಜಿ ಎಸ್ ಸಂಸ್ಥೆಯು ಶಿಕ್ಷಣದೊಂದಿಗೆ ಸಂಸ್ಕಾರಕ್ಕೂ ಆದ್ಯತೆ ನೀಡುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು. ಯಾವುದೇ ಹಂತದಲ್ಲೂ ವಿಶ್ವಾಸ ಕಳೆದು ಕೊಳ್ಳದೆ ಗುರಿಯತ್ತ ಸಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಇದೇ ವೇಳೆ ದಶಕಗಳಿಂದ ಸೇವೆ ಸಲ್ಲಿಸಿದ ಶಿಕ್ಷಕರು, ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಅಮೋಘ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಅಕಾಡೆಮಿಕ್ ಡೈರೆಕ್ಟರ್ ಪುಟ್ಟರಾಜು, ಪ್ರಾಂಶುಪಾಲೆ ನೇತ್ರಾವತಿ ಮತ್ತಿತರರು ಉಪಸ್ಥಿತರಿದ್ದರು.

Printed, Published and Owned by : PARVEEZ PASHA. Printed at: VEE KAY PROCESS.No.396, 1st Floor, Ooliga Complex,Sampige Road, Malleshwaram, Bengaluru – 560003, Karnataka,. Published at: At No-102, Dr. Rajkumar Nagar, Valagerahalli, Gandhi Nagar, Kengeri Upanagara, Bengaluru South, Bengaluru Urban - 560060, Karnataka Editor: PARVEEZ PASHA